


# ಅಮರ ಸುಳ್ಯ ಸುದ್ದಿ

ಸುಳ್ಯದ ಜನಪರ ಕನ್ನಡ ವಾರಪತ್ರಿಕೆ





Regd.No.PTR/126/2025-27
Licenced to Post under WPP
No. SK/WPP/PTR/156/2025-27

ಪ್ರಧಾನ ಸಂಪಾದಕರು: ಮುರಳೀಧರ ಅಡ್ಡನಪಾರೆ Email: amarasuddi@gmail.com Website: www.amarasuddi.com

Mob : 9449387044, Off. : 7338248044
Facebook : Amarasullia Suddi

RNI No. KAR KAN / 2012/ 49234 | ಸಂಪುಟ –15 | ಸಂಚಿಕೆ – 36 | 2026 ಜ.23 ರಿಂದ ಜ.29 | Posted at SULLIA M.D.G. ON 23-01-2026 | ಪುಟ–6 | ಬೆಲೆ: ರೂ. 4.00


## ಸುಳ್ಯ ತಾಲೂಕು ರಚನೆಗೊಂಡು 60ರ ಸಂಭ್ರಮಾಚರಣೆ
## ಸುಳ್ಯ ಅಂದು-ಇಂದು-ಮುಂದು ವಿಚಾರಸಂಕಿರಣ



## ಗ್ರಾಮೀಣ ಮತ್ತು ನಗರ ಪ್ರದೇಶದ ಸಮಸ್ಯೆ ಹಾಗೂ ತೊಡಕುಗಳ ಕುರಿತು ಮಾಸ್ಟರ್ ಪ್ಲಾನ್ ಅಗತ್ಯ: ಮಾಜಿ ಸಂಸದ ಕಟೀಲ್

ಸುಳ್ಯ ತಾಲೂಕು ರಚನೆಗೊಂಡು 60 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಅದ್ದೂರಿಯ ಸಂಭ್ರಮಾಚರಣೆಯು ಜ.21ರಂದು ಸುಳ್ಯದ ಕುರುಂಜಿ ಜಾನಕಿ ವೆಂಕಟ್ರಮಣ ಗೌಡ ಸಭಾಂಗಣದಲ್ಲಿ ನಡೆಯಿತು.

**ಮುಖ್ಯಪೇಟೆಯಲ್ಲಿ ಆಕರ್ಷಕ ಮೆರವಣಿಗೆ**

ಬೆಳಿಗ್ಗೆ ನಗರದ ಲಾಲ್ ಬಹಾದ್ದೂರ್ ಶಾಸ್ತ್ರಿ ವೃತ್ತದಿಂದ ಹೊರಟ ಆಕರ್ಷಕ ಮೆರವಣಿಗೆಯನ್ನು ಶಾಸಕಿ ಭಾಗೀರಥಿ ಮುರುಳ್ಯ ಅವರು ತೆಂಗಿನಕಾಯಿ ಒಡೆಯುವ ಮೂಲಕ ಉದ್ಘಾಟಿಸಿದರು. ರಾಜ್ಯ ಒಕ್ಕಲಿಗ ಸಂಘದ ಉಪಾಧ್ಯಕ್ಷ ಡಾ. ರೇಣುಕಾಪ್ರಸಾದ್ ಕೆ. ವಿ. ಅವರು ಚೆಂಡೆ ಬಾರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಸುಳ್ಯ ನಗರದಲ್ಲಿ ಸಾಗಿದ ಮೆರವಣಿಗೆಯು ಕಾರ್ಯಕ್ರಮ ಜರುಗುವ ಕುರುಂಜಿ ಜಾನಕಿ ವೆಂಕಟ್ರಮಣ ಗೌಡ ಸಭಾಂಗಣದ ತನಕ ಸಾಗಿತು. ಮೆರವಣಿಗೆಗೆ ಚೆಂಡೆ, ವಾದ್ಯ, ನಗಾರಿ, ಗೊಂಬೆ ವೇಷ ಭೂಷಣಗಳು ಮೆರಗು ನೀಡಿತ್ತು. ಮೆರವಣಿಗೆಯಲ್ಲಿ ನೂರಾರು ಮಂದಿ ಭಾಗವಹಿಸಿದ್ದರು.

ಸುಳ್ಯ ತಾಲೂಕು 60 ಸಂಭ್ರಮಾಚರಣೆ ಸಮಿತಿ ಅಧ್ಯಕ್ಷೆ, ಶಾಸಕಿ ಭಾಗೀರಥಿ ಮುರುಳ್ಯ ಅವರು ಅಧ್ಯಕ್ಷತೆ ವಹಿಸಿದ್ದರು. ಮಾಜಿ ಸಂಸದ ನಳೀನ್ ಕುಮಾರ್ ಕಟೀಲ್ ಅವರು ದೀಪಬೆಳಗಿಸಿ, ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು ಸುಳ್ಯ ತಾಲೂಕಿಗೆ 60 ವರ್ಷ ಪೂರ್ಣಗೊಂಡಿರುವುದು ಖುಷಿ ನೀಡಿದೆ. ಆದರೆ ಈ ಕಾರ್ಯಕ್ರಮ ಕೇವಲ, ಸಭೆಗೆ , ಭಾಷಣಕ್ಕೆ ಹಾಗೂ ಚರ್ಚೆಗೆ ಮಾತ್ರ ಸೀಮಿತವಾಗಬಾರದು. ಬದಲಾಗಿ ಇಡೀ ತಾಲೂಕಿನ ಸಂಪೂರ್ಣ ವಿವರಣೆ ಪಡೆದು ಕಂದಾಯ ಇಲಾಖೆಯ ಅಡಿಯಲ್ಲಿ ಗ್ರಾಮವಾರು ಹಿರಿಯರನ್ನು ಸೇರಿಸಿ, ತಾಲೂಕಿನ ಯಾವ 4 »

### ವಿಕಸಿತ ಭಾರತ ಪರಿಕಲ್ಪನೆಯಡಿ ಸುಳ್ಯದ ಸಮಗ್ರ ಅಭಿವೃದ್ಧಿ: ಸಂಸದ ಕ್ಯಾ.ಚೌಟ

ಇಲ್ಲಿನ ನೆಲದ ಸಂಸ್ಕೃತಿ, ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಅಭಿವೃದ್ಧಿ ಯೋಜನೆಯನ್ನು ಗಮನದಲ್ಲಿಟ್ಟುಕೊಂಡು ದೀರ್ಘಕಾಲಿಕ ಯೋಜನೆಯನ್ನು ರೂಪಿಸಬೇಕಿದೆ. ಪ್ರಧಾನಮಂತ್ರಿಯವರ ವಿಕಸಿತ ಭಾರತ ಪರಿಕಲ್ಪನೆಯಡಿ ಸುಳ್ಯದ ಅಭಿವೃದ್ಧಿ ಆಗಬೇಕಿದೆ. ಇದಕ್ಕಾಗಿ ಶ್ರಮವಹಿಸುತ್ತೇನೆ. ಈಗಾಗಲೇ ಸುಳ್ಯ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ ಬೇಡಿಕೆಗಳು ಬಂದಿವೆ. ಅವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಕೆಲಸಗಳಿಗೆ ಶ್ರಮವಹಿಸುತ್ತೇನೆ ಎಂದು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಹೇಳಿದರು.

### ತಾಲೂಕಿನ ಅಭಿವೃದ್ಧಿಯಲ್ಲಿ ಇಲಾಖಾಧಿಕಾರಿಗಳ ಪಾತ್ರ ದೊಡ್ಡದು: ಶಾಸಕಿ ಭಾಗೀರಥಿ

ಸುಳ್ಯ ತಾಲೂಕು ರಚನೆಗೊಂಡು 60 ವರ್ಷ ಪೂರ್ಣಗೊಂಡಿದೆ. ಇಲ್ಲಿ ಈವರೆಗೆ ಸಾಕಷ್ಟು ಅಭಿವೃದ್ಧಿ ಕೆಲಸಕಾರ್ಯಗಳು ನಡೆದಿದೆ. ಮುಂದೆ ನಡೆಯಲೂ ಇದೆ. ಆದರೆ ಒಂದು ತಾಲೂಕು ಅಭಿವೃದ್ಧಿಯಲ್ಲಿ ಜನಪ್ರತಿನಿಧಿಗಳ ಪಾತ್ರ ಎಷ್ಟು ಮುಖ್ಯವೋ ಆ ತಾಲೂಕಿನಲ್ಲಿ ಇರುವ ವಿವಿಧ ಇಲಾಖಾವಾರು ಅಧಿಕಾರಿವರ್ಗದವರ ಪಾತ್ರವೂ ಮುಖ್ಯವಾಗಿದೆ ಎಂದು ಶಾಸಕಿ ಹಾಗೂ ಷಷ್ಟ್ಯಬ್ದ ಆಚರಣಾ 4 »

## ಪಂಜ: ರಾಜ್ಯಮಟ್ಟದ ಯುವ ಸಂಭ್ರಮ–2026
## ಯುವಜನ ಮೇಳಗಳಿಂದ ಭಾರತೀಯ ಸಂಸ್ಕೃತಿ –ಪರಂಪರೆ ಉಳಿದಿದೆ ಮಾಜಿ ಸಂಸದ ನಳಿನ್ ಕಟೀಲ್

**ಯುವಜನ ಮೇಳಗಳ ಮೂಲಕ ಭಾರತೀಯ ಸಂಸ್ಕೃತಿ, ಪರಂಪರೆಯನ್ನು ಉಳಿಸಿ ಬೆಳೆಸುವ ಕೆಲಸ ಆಗಿದೆ ಎಂದು ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ಅವರು ಹೇಳಿದರು.**

ಅವರು ಸುಳ್ಯದ ಯುವಜನ ಸಂಯುಕ್ತ ಮಂಡಳಿ ನೇತೃತ್ವದಲ್ಲಿ ಜ.17 ರಂದು ಸಂಜೆ ಪಂಜದಲ್ಲಿ ನಡೆದ ರಾಜ್ಯಮಟ್ಟದ ಯುವ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಯುವಜನ ಮೇಳಗಳಿಗೆ ಇತ್ತೀಚೆಗೆ ಸರಕಾರದ ಪ್ರೋತ್ಸಾಹ ಕಡಿಮೆ ಆಗಿದೆ. ಯುವಜನ ಮೇಳಗಳು ಗ್ರಾಮೀಣ ಪ್ರತಿಭೆಗಳನ್ನು ಬೆಳೆಸಲು ಸಹಕಾರಿಯಾಗಿತ್ತು. ಪಂಜದ ಜನತೆ ಉತ್ತಮ ಕಾರ್ಯಕ್ರಮ ಮಾಡುವ ಮೂಲಕ ರಾಜ್ಯಸರ್ಕಾರದ ಕಣ್ಣು ತೆರೆಸಿದೆ. ರಾಜಕೀಯ ಮರೆತು ಸಂಘಟಿತವಾಗಿ ಜನರು ಕೆಲಸ ಮಾಡಿದ್ದಾರೆ.

ತುಳುನಾಡಿನ ದೈವರಾಧನೆ, ಯಕ್ಷಗಾನ, ಕಂಬಳ ನಂಬಿಯಿಂದಲೇ ಉಳಿದು ಬೆಳೆದು ಬಂದಿದೆ. ನಂಬಿಕೆಯಿದ್ದಾಗ ಮಾತ್ರ ಎಲ್ಲಾ ಕಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸಬಹುದು ಎಂದು ಕಟೀಲ್ ಅವರು ಹೇಳಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್. ಎನ್. ಮನ್ಮಥ ಮಾತನಾಡಿ ಯುವಕರು ಒಗ್ಗೂಡಿ ಕೆಲಸ ಮಾಡಿದ್ದರಿಂದ ಇಂತಹ ಒಳ್ಳೆಯ ಕಾರ್ಯಕ್ರಮ ಆಗಿದೆ. ಇದು ರಾಜ್ಯಕ್ಕೆ ಒಳ್ಳೆಯ ಸಂದೇಶ ನೀಡಿದೆ ಎಂದರು.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಮಾತನಾಡಿ ಈಗಿನ ಯುವ ಜನತೆಗೆ ವಸ್ತು ಪ್ರದರ್ಶನ ಮೂಲಕ ಕಲೆ ಸಾಹಿತ್ಯ ಸಂಸ್ಕೃತಿಯನ್ನು ತಿಳಿದುಕೊಳ್ಳುವ ಅವಕಾಶವಾಗಿದೆ.ಇದರಿಂದ ಕಲೆ ಸಂಸ್ಕೃತಿ ಬೆಳೆಸುವ ಕೆಲಸ ಆಗಿದೆ ಎಂದರು.

ಅನ್ನಪೂರ್ಣೇಶ್ವರೀ ಕ್ಷೇತ್ರ ಯೋಗೀಶ್ವರಿ ಸಿದ್ಧ ಮಠ ಮರ್ಕಂಜ ಇದರ ದರ್ಮದರ್ಶಿ 5 »



### ತಾಲೂಕು ಮಟ್ಟದಲ್ಲಿ ಯುವಜನ ಮೇಳ ಆಗಬೇಕು: ಶಾಸಕಿ ಭಾಗೀರಥಿ

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಶಾಸಕಿ ಭಾಗೀರಥಿ ಮುರುಳ್ಯ ಅವರು ಮಾತನಾಡಿ ಈ ಹಿಂದೆ ತಾಲೂಕು ಕೇಂದ್ರಗಳಲ್ಲಿ ಯುವಜನ ಮೇಳಗಳು ನಡೆಯುತ್ತಿತ್ತು. ಆ ಬಳಿಕ ಸರಕಾರ ಅದನ್ನು ನಿಲ್ಲಿಸಿದೆ. ಸರಕಾರ ತಾಲೂಕು ಮಟ್ಟದಲ್ಲಿ ಯುವಜನ ಮೇಳ ನಡೆಯುವಂತೆ ಮಾಡಬೇಕು ಎಂದರಲ್ಲದೆ, ತಾನು ಶಾಸಕಿಯಾದ ಪ್ರಥಮ ವಿಧಾನಸಭಾ ಅದಿವೇಶನದಲ್ಲಿ ಈ ಬಗ್ಗೆ ಸರ್ಕಾರದ ಗಮನ ಸೆಳೆದಿರುವುದಾಗಿ ತಿಳಿಸಿದರು.

## ಸೌಹಾರ್ದ ಸಂಭ್ರಮದೊಂದಿಗೆ ಎಣ್ಮೂರು ಮಖಾಂ ಉರೂಸ್ ಪರಿ ಸಮಾಪ್ತಿ
## ಧರ್ಮದ ತಡೆಗೋಡೆ ಭೇದಿಸಿ ಖುಷಿಪಟ್ಟ ಜನಸಾಗರ, ಸುಂದರ ನಿಮಿಷಗಳಿಗೆ ಸಾಕ್ಷಿಯಾದ ಉಮರಾ ಸಮಾವೇಶ

**ಇತಿಹಾಸ ಪ್ರಸಿದ್ಧ ಎಣ್ಣೂರು–ಐವತ್ತೊಕ್ಕು ರಹ್ಮಾನಿಯಾ ಕೇಂದ್ರ ಜುಮಾ ಮಸ್ಜಿದ್ ದರ್ಗಾ ಶರ್ಫ್‌ನಲ್ಲಿ ಎಣ್ಣೂರು ಮಖಾಂ ಉರೂಸ್ ಜ.15ರಿಂದ 17ರದ ರೆಗೆ ನಡೆದು ಸೌಹಾರ್ದತೆಗೆ ಸಾಕ್ಷಿಯಾಯಿತು.ಜನವರಿ 17ರಂದು ನಡೆದ ಸಮಾರೋಪ ಸಮಾರಂಭಕ್ಕೆ ಸಹಸ್ರಾರು ಮಂದಿ ಭಕ್ತರು ಜಾತಿ ಭೇದವಿಲ್ಲದೆ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು.**



ಎಣ್ಣೂರು ರಹ್ಮಾನಿಯಾ ಕೇಂದ್ರ ಜುಮಾ ಮಸ್ಜಿದ್ ದರ್ಗಾ ಶರೀಫ್ ನಲ್ಲಿ ಅಂತ್ಯ ವಿಶ್ರಮಗೊಳ್ಳುತ್ತಿರುವ ವಲಿಯುಲ್ಲಾಹಿ ಮಣ್ ಹೂರತ್ ಬೀಬಿ ಅವರ ಮಖಾಂ ಹಲವಾರು ಪವಾಡ ಗಳಿಗೆ ಪ್ರಸಿದ್ಧಿಯನ್ನು ಪಡೆದಿದ್ದು ಸಾವಿರಾರು ಮಂದಿ ಭಕ್ತರು ಜಾತಿ ಮತ ಭೇಧವಿಲ್ಲದೆ ಇಲ್ಲಿಗೆ ಹರಕ ಹೊತ್ತು ಬರುವ ವಾಡಿಕೆ ತಲಾಂತರದಿಂದ ನಡೆದು ಬರುತ್ತಿದೆ.

ಜ.15ರಂದು ಬೆಳಿಗ್ಗೆ ಧ್ವಜಾರೋಹಣ ಕಾರ್ಯಕ್ರಮ ನಡೆದು ಈ ವರ್ಷ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಧ್ವಜಾರೋಹಣವನ್ನು ಮಹಮ್ಮದ್ ಹನೀಫ್ ಐವತ್ತೊಕ್ಲು ನೆರವೇರಿಸಿ,ಮಗ್ರಿಬ್ ನಮಾಝಿನ ನಂತರ ಉದ್ಘಾಟನಾ ಸಮಾರಂಭಲ್ಲಿ ಅಸ್ಸಯ್ಯದ್ ಎನ್.ಪಿ.ಎಂ. ಝುನುಲ್ ಅಬಿದೀನ್ ತಂಬಳ್ ಅಲ್ ಬುಖಾರಿ ದುಗಲಡ್ಕ 5 »

## ಜಿ ಎಲ್ ಆಚಾರ್ಯ ಜ್ಯುವೆಲ್ಲರ್‌ನಲ್ಲಿ ರಿಪಬ್ಲಿಕ್ ಸೇಲ್ ಕೊಡುಗೆ

ಪ್ರತಿಷ್ಠಿತ ಚಿನ್ನಾಭರಣಗಳ ಮಳಿಗೆ ಜಿ ಎಲ್ ಆಚಾರ್ಯ ಜ್ಯುವೆಲ್ಲರ್‌ನಲ್ಲಿ ಗಣರಾಜ್ಯೋತ್ಸವ ಹಬ್ಬದ ಪ್ರಯುಕ್ತ ಜನವರಿ 22ರಿಂದ 26ರವರೆಗೆ ರಿಪಬ್ಲಿಕ್ ಸೇಲ್ ವಿಶೇಷ ರಿಯಾಯಿತಿ ಕೊಡುಗೆಗಳನ್ನು ಪ್ರಕಟಿಸಲಾಗಿದೆ. ಚಿನ್ನ ಹಾಗೂ ವಜ್ರಾಭರಣಗಳ ವಿಶೇಷ ಸಂಗ್ರಹವೇ ಗ್ರಾಹಕರಿಗೆ ಹಬ್ಬದ ವಾತಾವರಣ ಸೃಷ್ಟಿಸಿದೆ. 24ಕ್ಯಾರೆಟ್ ಚಿನ್ನದ ದರ 15,000 ದಾಟಿದೆ.ಈ ಫೆಸ್ಟಿವ್ ಶಾಪಿಂಗ್ ಸೀಸನ್‌ನಲ್ಲಿ ಚಿನ್ನದ ದರ ಬೆಲೆ ಏರಿಕೆಯ ಪರಿಣಾಮವನ್ನು ಕಡಿಮೆ ಮಾಡಲು ಈ ರಿಪಬ್ಲಿಕ್ ಸೇಲ್ ಆಫರ್ ಒಂದು ಸುವರ್ಣಾವಕಾಶ ಚಿನ್ನದ ಆಭರಣಗಳ ತಯಾರಿಕಾ ಶುಲ್ಕದ ಮೇಲೆ ಫ್ಲಾಟ್ ರೂ.3,500/–10ಗ್ರಾಂಗೆ ರಿಯಾಯಿತಿ ನೀಡಲಾಗಿದೆ. ಚಿನ್ನದ ದರ ಏರಿಕೆಯಿಂದಾಗಿ ಲೈಟ್ ವೈಟ್, 18ಕ್ಯಾರೆಟ್‌ನಲ್ಲಿ ತಯಾರಿಸಿದಂತಹ ಗ್ಲೋ ಇಲೈಟ್ ವಜ್ರಾಭರಣಗಳು ಈಗ ಕೈಗೆಟಕುವ ದರದಲ್ಲಿ ಲಭ್ಯವಿದ್ದು ಅಷ್ಟೇ ಅಲ್ಲದೆ ವಜ್ರದ ಮೌಲ್ಯದ ಮೇಲೆ 90% ಬೈಬ್ಯಾಕ್ ಹೊಂದಿರುವ ಕಾರಣ ಮುಂದಿನ ದಿನಗಳಲ್ಲಿ ಅದನ್ನು ವಿನಿಮಯ ಮಾಡಲು ಅನುಕೂಲವಾಗುತ್ತದೆ. ಅಲ್ಲದೆ ವಜ್ರಾಭರಣಗಳ ಕ್ಯಾರಟ್ ಮೇಲೆ ರೂ.5000/– ಫ್ಲ್ಯಾಟ್ ಡಿಸೌಂಟ್ ಮಾಡುವುದಾಗಿ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ. ಲಾಂಗ್ ವೀಕೆಂಡ್ ಇರುವ ಕಾರಣ ಕುಟುಂಬದೊಂದಿಗೆ ಶಾಪಿಂಗ್ ಮಾಡುವ ಅನುಭವವನ್ನು ಪಡೆಯಬಹುದು. ಗ್ರಾಹಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಆಧುನಿಕ ಮತ್ತು ಪಾರಂಪರಿಕ ಚಿನ್ನದ ಆಭರಣಗಳು, ಮದುಮಗಳ ಅಲಂಕಾರ ಆಭರಣಗಳ ವಿನೂತನ ಸಂಗ್ರಹ, ಪ್ರಾಚಿ ಇಲೈಟ್ ಮತ್ತು ಲೈಟ್ ವೈಟ್ ಆಭರಣಗಳು ಸಹ ಲಭ್ಯವಿದ್ದು ವಜ್ರಾಭರಣಗಳಿಗೆ ಹಾಗೂ ಗುಣಮಟ್ಟದ ಚಿನ್ನಾಭರಣಗಳ ಮಾರಾಟದಲ್ಲಿ ಹೆಸರುವಾಸಿಯಾಗಿರುವ ಸಂಸ್ಥೆಯು ಮೂಡಬಿದ್ರೆ, ಸುಳ್ಯ, ಕುಶಾಲನಗರ ಹಾಗೂ ಹಾಸನದಲ್ಲಿ ತಮ್ಮ ಮಳಿಗೆಗಳನ್ನು ಹೊಂದಿದೆ. ಷರತ್ತುಗಳ ಅನ್ವಯದೊಂದಿಗೆ ಈ ಕೊಡುಗೆ ತಮ್ಮ ಎಲ್ಲಾ ಮಳಿಗೆಗಳಲ್ಲಿ ಲಭ್ಯವಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.




## ಗುತ್ತಿಗಾರು: ಬೃಹತ್ ಹಿಂದೂ ಸಂಗಮ ಕಾರ್ಯಕ್ರಮ
### ಆರ್.ಎಸ್.ಎಸ್ ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿದೆ: ನಾಗರಾಜ್ ಭದ್ರಾವತಿ
### ದೇಶದ ಐಕ್ಯತೆಗೆ ನಮ್ಮ ಕುಟುಂಬ ಜೀವನ ವ್ಯವಸ್ಥೆಯೇ ಕಾರಣ: ಎಂ.ಬಿ.ಸದಾಶಿವ

**"ಆರ್ ಎಸ್.ಎಸ್ ವ್ಯಕ್ತಿ ನಿರ್ಮಾಣದ ಮೂಲಕ ಹಿಂದೂ ಸಮಾಜದ ಸಂಘಟನೆಯೊಂದಿಗೆ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಿದೆ ಎಂದು" ಮುಖ್ಯ ಭಾಷಣಕಾರರಾಗಿ ಆಗಮಿಸಿದ ಸಂಘದ ಕರ್ನಾಟಕ ಘೋಷ್ ಪ್ರಮುಖ್ ಆಗಿ ಪ್ರಸ್ತುತ ವಿಕ್ರಮ ವಾರಪತ್ರಿಕೆಯ ಸಹ ಸಂಪಾದಕ ನ.ನಾಗರಾಜ್ ಭದ್ರಾವತಿ ಹೇಳಿದರು.**



ಅವರು ಗುತ್ತಿಗಾರಿನಲ್ಲಿ ಜ.18 ರಂದು ನಡೆದ ಹಿಂದು ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದರು. "ಮೇಲು–ಕೀಳು ಎನ್ನುವ ಅಹಂಕಾರ ಬಿಟ್ಟು ಎಲ್ಲರನ್ನು ನಮ್ಮವರು ಎಂದು ನೋಡಬೇಕು. ಇದರಿಂದಾಗಿಯೇ ಪರಕೀಯರು ನಮ್ಮನ್ನು ಆಳುವಂತಾಯಿತು. ನೂರು ವರ್ಷದಲ್ಲಿ ಆರ್.ಎಸ್.ಎಸ್ ಏನು ಮಾಡಿದೆ ಎನ್ನುವ ಸಂಶಯ ಕೆಲವರಲ್ಲಿದೆ. ಆರ್ ಎಸ್.ಎಸ್ ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣ ಮಾಡಿದೆ. ವ್ಯಕ್ತಿ ನಿರ್ಮಾಣದಿಂದ ಸಂಘಟನೆ, ಜತೆಗೆ ಸಮಾಜ ಬೆಳೆಯಿತು. 4 »

## ಕಾಯರ್ತೋಡಿ: ಮಹಾವಿಷ್ಣು ದೇವಸ್ಥಾನದಲ್ಲಿ ಜ.26–28ರವರೆಗೆ ಜಾತ್ರೋತ್ಸವ

**ಕಾಯರ್ತೋಡಿ ಶ್ರೀ ಮಹಾವಿಷ್ಣು ದೇವಸ್ಥಾನದಲ್ಲಿ ಜ.26 ರಿಂದ ಜ.28 ರವರೆಗೆ ಶ್ರೀ ದೇವರ ಕಾಲಾವಧಿ ಜಾತ್ರೋತ್ಸವ ನಡೆಯಲಿದ್ದು ಇದರ ಅಂಗವಾಗಿ ಜ.20 ರಂದು ಗೊನೆ ಮುಹೂರ್ತ ನೆರವೇರಿತು.**



ಈ ಸಂದರ್ಭದಲ್ಲಿ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಎಂ.ವೆಂಕಪ್ಪ ಗೌಡ, ಸದಸ್ಯರಾದ ವಿಠಲ ಬಾಣೂರು, ಜತ್ತಪ್ಪ ರೈ, ಕುಶಾಲಪ್ಪ ಗೌಡ ಸೂರ್ತಿಲ, ಶ್ರುತಿ ಮಂಜುನಾಥ್, ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಪಿ.ಕೆ.ಉಮೇಶ್, ಸೇವಾ ಸಮಿತಿಯ ಕುಸುಮಾಧರ ಎ.ಟಿ., ಕೃಷ್ಣ ಬೆಟ್ಟ, ವೆಂಕಟ್ರಮಣ ಡಿ.ಎಸ್., ರಘುನಾಥ ರೈ, ದಾಮೋದರ ಕನ್ನಡ್ಕ, ಚಂದ್ರಶೇಖರ ಅಡ್ಪಂಗಾಯ, ನವೀನ್ ಕುದ್ಪಾಜೆ, ಪ್ರಶಾಂತ್ ಆಚಾರ್ಯ, ಹರಿಶ್ಚಂದ್ರ ಮೇಲಡ್ತಲೆ, ಕುಶಾಲಪ್ಪ ಟೈಲರ್ ಕುಂಜತ್ತಾಡಿ, ಬಾಲಕೃಷ್ಣ ನಿಶ್ಮಿತಾ ಗ್ಯಾರೇಜ್, ದೀಪಕ್ ಅಳಿಕೆಮಜಲು, ಶ್ರೀಮತಿ ಶೀಲಾವತಿ ಅಳಿಕೆ ಮಜಲು, ಲೀಲಾ ವಾಸುದೇವ ಬೆಳ್ಳಿಪ್ಪಾಡಿ, ಅರ್ಚಕರಾದ ನೀಲಕಂಠ ಭಟ್ ಎಂ.ಪಿ., ಸಿಬ್ಬಂದಿ ದೇವಿಪ್ರಸಾದ್ ಉಪಸ್ಥಿತರಿದ್ದರು.

ಜ.26 ರಂದು ಸಂಜೆ 4.00ರಿಂದ ಶ್ರೀ ಚೆನ್ನಕೇಶವ ದೇವಾಲಯದ ವಿದ್ಯಾರ್ಥಿಗಳಿಂದ ಭಗವದ್ಗೀತೆ ಪಠಣ ಮತ್ತು ವಿಷ್ಣು 4 »

## ಜ.25ರಂದು ಒಂದೇ ದಿನ 6 ಕಡೆಗಳಲ್ಲಿ ಹಿಂದೂ ಸಂಗಮ

**ಹಿಂದೂ ಸಂಗಮ ಕಾರ್ಯಕ್ರಮವು ಸುಳ್ಯ ತಾಲೂಕಿನಾದ್ಯಂತ ಅಲ್ಲಲ್ಲಿ ನಡೆಯುತ್ತಿದ್ದು ಜ.25ರಂದು ಒಂದೇ ದಿನ ತಾಲೂಕಿನ 6 ಪ್ರಮುಖ ಕೇಂದ್ರಗಳಲ್ಲಿ ನಡೆಯಲಿದೆ.**



ಜ.25ರಂದು ಅರಂತೋಡಿನ ಜ್ಯೋತಿ ಪ್ರೌಢ ಶಾಲೆ, ಅಜ್ಜಾವರದ ಮೇನಾಲ ಬೇಲೆಂತಿಮಾರು ಗದ್ದೆ, ಜಾಲ್ಸೂರಿನ ಜೆ.ಕೆ ಮೈದಾನ, ಪಂಜದ ದೀನ ದಯಾಳ ಸಂಕೀರ್ಣದ ಮುಂಭಾಗ, ದೊಡ್ಡತೋಟದ ಎಲಿಮಲೆ ಜ್ಞಾನದೀಪ ಶಾಲೆ, ಸುಳ್ಯ ನಗರದ ಪ್ರಭು ಮೈದಾನದಲ್ಲಿ ನಡೆಯಲಿದೆ.

ಜ.24ರಂದು ಸುಬ್ರಹ್ಮಣ್ಯ ಮಠದ ಆವರಣದಲ್ಲಿ, ಫೆ.1ರಂದು ಕಲ್ಲುಗುಂಡಿಯ ಒತ್ತೆಕೋಲ ಗದ್ದೆ, ಐವರ್ನಾಡು, ಬೆಳ್ಳಾರೆ ಅಜಪಿಲ ಶ್ರೀ ಮಹಾಲಿಂಗೇಶ್ವರ ದೇವಾಲಯದ ವಠಾರ, ಎಣ್ಮೂರು ಮುರುಳ್ಯದ ಕೃಷ್ಣಲೀಲಾ ಮೈದಾನದಲ್ಲಿ ಹಾಗೂ ಫೆ.2ರಂದು ಹರಿಹರಪಳ್ಳತ್ತಡ್ಕದ ಕೂಜುಗೋಡು ಕಟ್ಟೆಮನೆ ತಮ್ಮಯ್ಯ ಗೌಡ ಕ್ರೀಡಾಂಗಣ ಬಾಳುಗೋಡಿನಲ್ಲಿ ಹಿಂದೂ ಸಂಗಮ ಜರುಗಲಿದೆ.




## ಚಿತ್ರಕಲಾ ಗ್ರೇಡ್ ಪರೀಕ್ಷೆಯಲ್ಲಿ ಸುಬ್ರಹ್ಮಣ್ಯದ ಕುಮಾರಸ್ವಾಮಿ ವಿದ್ಯಾಲಯಕ್ಕೆ ಶೇ.100 ಫಲಿತಾಂಶ



ಕರ್ನಾಟಕ ಶಾಲಾ ಪರೀಕ್ಷೆ ಮತ್ತು ನಿರ್ಣಯ ಮಂಡಳಿ, ಬೆಂಗಳೂರು ಇವರು ನಡೆಸುವ ಚಿತ್ರಕಲಾ ಗ್ರೇಡ್ ಪರೀಕ್ಷೆಯಲ್ಲಿ ಸುಬ್ರಹ್ಮಣ್ಯದ ಕುಮಾರಸ್ವಾಮಿ ವಿದ್ಯಾಲಯವು ಶೇಕಡಾ 100 ಫಲಿತಾಂಶ ದಾಖಲಿಸಿದ್ದು, ಸಂಸ್ಥೆಯಿಂದ ಒಟ್ಟು ಲೋವರ್ ಗ್ರೇಡ್ ಪರೀಕ್ಷೆಯಲ್ಲಿ 11 ವಿದ್ಯಾರ್ಥಿಗಳು ಹಾಗೂ ಹೈಯರ್ ಗ್ರೇಡ್ ಪರೀಕ್ಷೆಯಲ್ಲಿ 15 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇದರಲ್ಲಿ ಹೈಯರ್ ಗ್ರೇಡ್ ನಲ್ಲಿ ತನ್ವಿ ಪಿ.ಎಸ್ 9ನೇ ತರಗತಿ ಹಾಗೂ ಲೋವರ್ ಗ್ರೇಡ್ ಪರೀಕ್ಷೆಯಲ್ಲಿ ಎಸ್.ಎಸ್ ಚಂದಸ್ 9ನೇ ತರಗತಿ ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದು, ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ.

## 42 ಕಿ.ಮೀ ಫುಲ್ ಮ್ಯಾರಥಾನ್ ಸ್ಪರ್ಧೆಯಲ್ಲಿ ವಿದ್ಯಾ ಹರೀಶ್ ಬಂಗಾರಕೋಡಿ ಪ್ರಥಮ



ವಿದ್ಯಾ ಹರೀಶ್ ಬಂಗಾರಕೋಡಿ ಅವರು ಮಂಗಳೂರಿನಲ್ಲಿ ನಡೆದ ಸಮುದ್ರ ಹಬ್ಬದ ಪ್ರಯುಕ್ತ ನಡೆದ 42 ಕಿಲೋಮೀಟರ್ ಫುಲ್ ಮ್ಯಾರಥಾನ್ ನಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. 5 ರಿಂದ 21 ಕಿಲೋಮೀಟರ್‌ನ ಹಲವಾರು ಮ್ಯಾರಥಾನ್ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಹಾಗೂ ದ್ವಿತೀಯ ಸ್ಥಾನವನ್ನು ಪಡೆದುಕೊಂಡ ಇವರು ಇದೀಗ ಪ್ರಪ್ರಥಮ ಬಾರಿಗೆ 42 ಕಿಲೋಮೀಟರ್ ಫುಲ್ ಮ್ಯಾರಥಾನ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದ ರಂಗತ್ತಮಲೆ ಆರ್.ಕೂಸಪ್ಪ ಹಾಗೂ ಸಣ್ಣಮ್ಮ ದಂಪತಿಗಳ ಪುತ್ರಿಯಾಗಿರುವ ಇವರು ಸ್ವರ್ಣಶ್ರೀ ಶಕ್ತಿ ಸಂಘದ ಸದಸ್ಯೆ, ಶ್ರೀ ಶಕ್ತಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸದಸ್ಯೆ, ಅರಂತೋಡು ತೊಡಿಕಾನ ಅಕ್ಷಯ ಗೊಂಚಲಿನ ಸದಸ್ಯೆ ಹಾಗೂ ಕೋಟೆ ಪೆರಾಜೆಯ ಅನ್ನಪೂರ್ಣೇಶ್ವರಿ ಭಜನಾ ಮಂಡಳಿಯ ಸದಸ್ಯೆಯಾಗಿದ್ದಾರೆ.

## ಅರಂತೋಡು ಹಿರಿಯ ಪ್ರಾಥಮಿಕ ಶಾಲೆಗೆ ಊಟದ ತಟ್ಟೆ ಕೊಡುಗೆ



ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಅರಂತೋಡು ಇಲ್ಲಿಗೆ ಅರಂತೋಡಿನ ಕೃಷಿಕ ಯುವ ಉದ್ಯಮಿ ಯು.ಎಂ ವಿನೋದ್ ಕುಮಾರ್ ಮತ್ತು ಮನೆಯವರು ಉಳುವಾರು ಮಲ್ಲಡ್ಕ ಇವರಿಂದ 100 ಊಟದ ತಟ್ಟೆಯನ್ನು ಶಾಲಾ ಎಸ್.ಡಿ.ಎಂ.ಸಿ. ಅಧ್ಯಕ್ಷರಿಗೆ ಹಸ್ತಾಂತರ ಮಾಡಿದರು.

## ಪ್ರಗತಿಪರ ಹೈನುಗಾರ ಪ್ರಶಸ್ತಿಗೆ ಮೋಹಿನಿ ಯತೀಶ್ ಗೋಳ್ಯಾಡಿ ಆಯ್ಕೆ



ಮಡಪ್ಪಾಡಿ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘದ ಸದಸ್ಯರಾದ ಶ್ರೀಮತಿ ಮೋಹಿನಿ ಯತೀಶ್ ಗೋಳ್ಯಾಡಿ ಅವರು ಕ್ಷೀರಾಸಂಜೀವಿನಿ ಯೋಜನೆಯ ದಶಮಾನೋತ್ಸವದ ಪ್ರಯುಕ್ತ ಜನವರಿ 17, 2026ರಂದು ಬೆಂಗಳೂರಿನ ಜಿ.ಕೆ.ವಿ.ಕೆ.ಯಲ್ಲಿ ನಡೆಯಲಿರುವ ಪ್ರಗತಿಪರ ಹೈನುಗಾರರ ಸಮಾವೇಶ ಹಾಗೂ ತಾಂತ್ರಿಕ ವಿಚಾರಗೋಷ್ಠಿಯಲ್ಲಿ ನೀಡಲಾಗುವ ಪ್ರಗತಿಪರ ಹೈನುಗಾರ ಪ್ರಶಸ್ತಿಗೆ ತಾಲೂಕು ಮಟ್ಟದಲ್ಲಿ ಆಯ್ಕೆಯಾಗಿದ್ದಾರೆ.

ಹೈನುಗಾರಿಕೆಯಲ್ಲಿ ಸಾಧನೆಯ ಹಾದಿ ಸುಲಭವಿರಲಿಲ್ಲ. ಹಳದಿ ರೋಗದಿಂದ ಸುಮಾರು 2000 ಅಡಿಕೆ ಮರಗಳು ನಾಶವಾದ ಕಠಿಣ ಪರಿಸ್ಥಿತಿಯ ನಡುವೆಯೂ ಹೈನುಗಾರಿಕೆಯನ್ನು ಪರ್ಯಾಯ ಜೀವನೋಪಾಯವಾಗಿ ಸ್ವೀಕರಿಸಿ, ಶ್ರಮ, ನಿಷ್ಠೆ ಹಾಗೂ ಆಧುನಿಕ ಪದ್ಧತಿಗಳ ಮೂಲಕ ದಾಖಲೆ ಮಟ್ಟದ ಸಾಧನೆ ಮಾಡಿದ್ದಾರೆ.

ಈ ಸಾಧನೆಯ ಹಿಂದೆ ಪತಿ ಯತೀಶ್ ಅವರ ನಿರಂತರ ಬೆಂಬಲವೇ ಬೆನ್ನೆಲುಬಾಗಿದ್ದು, ಕುಟುಂಬದ ಸಹಕಾರದಿಂದ ಹೈನುಗಾರಿಕೆಯನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ. ಹಾಲು ಉತ್ಪಾದನೆ, ಜಾನುವಾರುಗಳ ಆರೈಕೆ ಹಾಗೂ ಸಹಕಾರಿ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಇತರ ರೈತರಿಗೆ ಮಾದರಿಯಾಗಿದ್ದಾರೆ.

## ಬಾಳುಗೋಡಿನಲ್ಲಿ ಫೆ.02ರಂದು "ಬೃಹತ್ ಹಿಂದೂ ಸಂಗಮ ಮತ್ತು ಶೋಭಾಯಾತ್ರೆ"




ಹಿಂದೂ ಸಂಗಮ ಹರಿಹರ ಮಂಡಲ ಇದರ ವತಿಯಿಂದ ಹಿಂದೂ ಸಮಾಜದ ಏಕತೆ, ಸಾಮರಸ್ಯ, ಸಾಮಾಜಿಕ ಪರಿವರ್ತನೆ ಹಾಗೂ ಧಾರ್ಮಿಕ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ ಫೆ.02ರಂದು ಬಾಳುಗೋಡು ದಿ.ತಮ್ಮಯ್ಯ ಗೌಡ ಕೂಜುಗೋಡು–ಕಟ್ಟೆಮನೆ ಕ್ರೀಡಾಂಗಣ, ಬೆಟ್ಟುಮಕ್ಕಿ–ಮುಚ್ಚಾರ ಇಲ್ಲಿ "ಬೃಹತ್ ಹಿಂದೂ ಸಂಗಮ ಮತ್ತು ಶೋಭಾಯಾತ್ರೆ" ನಡೆಯಲಿದ್ದು, ಅಪರಾಹ್ನ 3:00 ಗಂಟೆಗೆ ಬಾಳುಗೋಡು ಪದಕ ಅಂಚೆ ಕಛೇರಿ ಸಮೀಪದಿಂದ ಶೋಭಾಯಾತ್ರೆ ನಡೆಯಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.


## ಜ.26–ಜ.29: ಅಯ್ಯನಕಟ್ಟೆ ಜಾತ್ರೋತ್ಸವದ ಗೊನೆಮುಹೂರ್ತ



ಅಯ್ಯನಕಟ್ಟೆ ಶ್ರೀ ಇಷ್ಟದೇವತಾ ಉಳ್ಳಾಕುಲು ಸೇವಾ ಸಮಿತಿ ಮೂರುಕಲ್ಲಡ್ಕ ಇದರ ಆಶ್ರಯದಲ್ಲಿ ಜ. 26ರಿಂದ 29ರ ತನಕ ನಡೆಯಲಿರುವ ಶ್ರೀ ಇಷ್ಟದೇವತಾ ಉಳ್ಳಾಕುಲು ಹಾಗೂ ಸಪರಿವಾರ ದೈವಗಳ ವಾರ್ಷಿಕ ಜಾತ್ರೋತ್ಸವಕ್ಕೆ ಗೊನೆಮುಹೂರ್ತ ಜ. 20ರಂದು ಮೂಲಸ್ಥಾನ ಮೂರುಕಲ್ಲಡ್ಕದಲ್ಲಿ ನಡೆಯಿತು.

ಪ್ರಧಾನ ಪೂಜಾರಿ ಲಕ್ಷ್ಮಣ ಗೌಡ ಬೇರಿಕೆ ದೇವತಾ ಪ್ರಾರ್ಥನೆ ಮಾಡಿದರು. ಅಯ್ಯನಕಟ್ಟೆ ಶ್ರೀ ಇಷ್ಟದೇವತಾ ಉಳ್ಳಾಕುಲು ಸೇವಾ ಸಮಿತಿಯ ವಿಶ್ವಸ್ಥರು, ಸಮಿತಿಯ ಪದಾಧಿಕಾರಿಗಳು, ಭಕ್ತಾದಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

## ಕನಕಮಜಲು : ಯುವಜನ ವಿಕಾಸ ಕೇಂದ್ರ ಯುವಕ ಮಂಡಲದ ವಾರ್ಷಿಕ ಮಹಾಸಭೆ ಮತ್ತು ಪದಗ್ರಹಣ



ಯುವಜನ ವಿಕಾಸ ಕೇಂದ್ರ ಯುವಕ ಮಂಡಲ(ರಿ.) ಕನಕಮಜಲು ಇದರ ವಾರ್ಷಿಕ ಸಭೆಯು 11 ಜನವರಿ 2026ನೇ ಆದಿತ್ಯವಾರದಂದು ಗ್ರಾಮ ಪಂಚಾಯತ್ ಸಭಾಭವನದಲ್ಲಿ ನಡೆಯಿತು.

ವಾರ್ಷಿಕ ಮಹಾಸಭೆಯ ಸಭಾಧ್ಯಕ್ಷರಾಗಿ ಯುವಕ ಮಂಡಲ(ರಿ.) ಕನಕಮಜಲು ಇದರ ಅಧ್ಯಕ್ಷರಾದ ಹರ್ಷಿತ್ ಉಗ್ಗಮೂಲೆ ವಹಿಸಿದ್ದರು. ವೇದಿಕೆಯಲ್ಲಿ ಗೌರವಾಧ್ಯಕ್ಷರಾದ ರಕ್ಷಿತ್ ಅಕ್ಕಿಮಲೆ, ಕಾರ್ಯದರ್ಶಿ ಅಶ್ವಥ್ ಅಡ್ಕಾರ್ ಉಪಸ್ಥಿತರಿದ್ದರು.

ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಅಶ್ವಥ್ ಅಡ್ಕಾರ್ ವಾಚಿಸಿದರು. ವಾರ್ಷಿಕ ಲೆಕ್ಕಪತ್ರ ಮಂಡನೆಯನ್ನು ಅಧ್ಯಕ್ಷರಾದ ಹರ್ಷಿತ್ ಉಗ್ಗಮೂಲೆ ಮಂಡಿಸಿದರು. 2026– 27ನೇ ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ಗೌರವಾಧ್ಯಕ್ಷರಾದ ರಕ್ಷಿತ್ ಅಕ್ಕಿಮಲೆ ನಡೆಸಿಕೊಟ್ಟರು. ಪ್ರಖ್ಯಾತ್ ಕೊಡ್ತಿಲು ಸ್ವಾಗತಿಸಿ, ಅಶ್ವಥ್ ಅಡ್ಕಾರ್ ವಂದಿಸಿದರು. ಚಂದ್ರಶೇಖರ್ ನೆಡಿಲು ಕಾರ್ಯಕ್ರಮ ನಿರೂಪಿಸಿದರು.

**ಪದಗ್ರಹಣ:** ಪದಗ್ರಹಣ ಸಮಾರಂಭದ ಸಭಾಧ್ಯಕ್ಷತೆಯನ್ನು ಹರ್ಷಿತ್ ಉಗ್ಗಮೂಲೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಮನೋಜ್ ನರಿಯೂರು ಉದ್ಯಮಿಗಳು ಮತ್ತು ಪ್ರಗತಿಪರ ಕೃಷಿಕರು, ಪ್ರಸಾದ್ ಕಾಟೂರು ನಿರ್ದೇಶಕರು ಯುವಜನ ಸಂಯುಕ್ತ ಮಂಡಳಿ(ರಿ.) ಸುಳ್ಯ, ಮುರಳಿ ನಳಿಯಾರು ಪ್ರಧಾನ ಕಾರ್ಯದರ್ಶಿ ಯುವಜನ ಸಂಯುಕ್ತ ಮಂಡಳಿ(ರಿ.) ಸುಳ್ಯ, ನೂತನ ಅಧ್ಯಕ್ಷರಾದ ಅಶ್ವಥ್ ಅಡ್ಕಾರ್, ನೂತನ ಕಾರ್ಯದರ್ಶಿ ಚೇತನ್ ಡಿ.ಕೆ, ವೇದಿಕೆಯಲ್ಲಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮನೋಜ್ ನರಿಯೂರು ಇವರನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು. ಯುವಕ ಮಂಡಲದ ಪೂರ್ವಾಧ್ಯಕ್ಷರಾದ ನೇತ್ರಕುಮಾರ್ ಪೆರೋಳಿ ಸನ್ಮಾನಿಸಿದರು.

2026–27ನೇ ಸಾಲಿನ ನೂತನ ಪದಾಧಿಕಾರಿಗಳಿಗೆ ಯುವಜನ ಸಂಯುಕ್ತ ಮಂಡಳಿ ನಿರ್ದೇಶಕ ಪ್ರಸಾದ್ ಕಾಟೂರು ಪ್ರಮಾಣ ವಚನ ಬೋಧಿಸಿದರು.

ಗೌರವಾಧ್ಯಕ್ಷರಾಗಿ ಹರ್ಷಿತ್ ಉಗ್ಗಮೂಲೆ, ಅಧ್ಯಕ್ಷರಾಗಿ ಅಶ್ವಥ್ ಅಡ್ಕಾರ್, ಉಪಾಧ್ಯಕ್ಷರಾಗಿ ಸ್ವಸ್ತಿಕ್ ಕುತ್ಯಾಳ, ಕಾರ್ಯದರ್ಶಿಯಾಗಿ ಚೇತನ್ ಡಿ.ಕೆ, ಜೊತೆ ಕಾರ್ಯದರ್ಶಿಯಾಗಿ ಪುನೀತ್ ಸಾಂತ್ಯಡ್ಕ, ಕೋಶಾಧಿಕಾರಿಯಾಗಿ ಪ್ರಖ್ಯಾತ್ ಕೊಡ್ತಿಲು, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ರತನ್ ಕೊಲ್ಲಂತ್ತಡ್ಕ, ಕ್ರೀಡಾ ಕಾರ್ಯದರ್ಶಿಯಾಗಿ ಜಗದೀಶ್ ಮಾಣಿಕೋಡಿ, ಪತ್ರಿಕಾ ಪ್ರತಿನಿಧಿಯಾಗಿ ಇಂದಿರೇಶ ಕೊರ್ಬಂಡ್ಕ, ನಿರ್ದೇಶಕರುಗಳಾಗಿ ಸುನಿಲ್ ಅಕ್ಕಿಮಲೆ, ರವಿಚಂದ್ರ ಕನ್ನಡ್ಕಮೂಲೆ, ಅವಿನ್ ಮಳಿ, ಸ್ವಸ್ತಿಕ್ ಕಾಳಪ್ಪಜ್ಜನಮನೆ, ವರುಣ್ ಕಲ್ಲಾಜೆ, ದಿನೇಶ್ ಅನ್ಯೋಜಿ, ವಿನ್ಯಾಸ್ ಕಣಜಾಲು, ಜಗನ್ನಾಥ ಮಾಣಿಮಜಲು ಆಯ್ಕೆಯಾದರು.

## ಭಾರತೀಯ ಜನತಾ ಪಾರ್ಟಿ ಸುಳ್ಯ ಮಂಡಲ ಮಹಿಳಾ ಮೋರ್ಚಾ ವತಿಯಿಂದ ಬೆಳ್ಳಾರೆ ವಸತಿ ನಿಲಯಕ್ಕೆ ಭೇಟಿ




ಭಾರತೀಯ ಜನತಾ ಪಾರ್ಟಿ ಸುಳ್ಯ ಮಂಡಲ ಮಹಿಳಾ ಮೋರ್ಚಾದ ವತಿಯಿಂದ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷರಾದ ಮಂಜುಳಾ.ಸಿ ರವರ ಸೂಚನೆಯಂತೆ ಬೆಳ್ಳಾರೆಯ ಶ್ರೀ ದೇವರಾಜ್ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿಗಳ ಸರ್ವೇ ನಡೆಸಿದರು.

ನೂತನ ಕಟ್ಟಡದ ಅವಶ್ಯಕತೆ ಇದ್ದು, ಜೊತೆಗೆ ಇತರೆ ಸೌಲಭ್ಯಗಳ ಅಗತ್ಯತೆಯ ಬಗ್ಗೆ ವಿದ್ಯಾರ್ಥಿನಿಯರು ಮನವಿ ಸಲ್ಲಿಸಿದರು. ಮನವಿಗಳನ್ನು ಸಂಬಂಧಪಟ್ಟ ಇಲಾಖೆ ಹಾಗೂ ಅಧಿಕಾರಿಗಳ ಗಮನಕ್ಕೆ ತರುವುದಾಗಿ ಮಹಿಳಾ ಮೋರ್ಚಾದ ಸದಸ್ಯರು ಭರವಸೆ ನೀಡಿದರು.

ಜೊತೆಗೆ ವಸತಿ ನಿಲಯದ ಪಕ್ಕದಲ್ಲಿರುವ ಗ್ರಾಮ ಪಂಚಾಯತ್ ಜಾಗದ ಸುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸಲು ಸಂಬಂಧಪಟ್ಟವರಿಗೆ ಮನವಿ ಸಲ್ಲಿಕೆ ಮಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಕಾರ್ಯದರ್ಶಿ ಜಾಹ್ನವಿ ಕಾಂಚೋಡು, ಸುಳ್ಯ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷರಾದ ಇಂದಿರಾ.ಬಿ.ಕೆ, ಮಂಡಲ ಮಹಿಳಾ ಮೋರ್ಚಾ ಕಾರ್ಯದರ್ಶಿ ಆಶಾ ರೈ ಕಲಾಯಿ, ಸದಸ್ಯರುಗಳಾದ ಸುಜಾತಾ ಐವರ್ನಾಡು, ದಿವ್ಯಾ ಮಡಪ್ಪಾಡಿ, ದಿವ್ಯಾ ಯೋಗಾನಂದ, ಶಶಿಕಲಾ. ಆರ್ ರೈ ಬೇಲ್ಯ, ಒಬಿಸಿ ಮೋರ್ಚಾ ಸದಸ್ಯರಾದ ಚಂದ್ರಾವತಿ ಸುಣ್ಣಾಜೆ, ಸವಣೂರು ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಜಯಶ್ರೀ ಹಾಗೂ ಬಿಜೆಪಿ ಕಾರ್ಯಕರ್ತರಾದ ಪುಷ್ಪಾವತಿ ಕೇಕುಡೆ ಉಪಸ್ಥಿತರಿದ್ದರು.

## ಯೇನೆಕಲ್ಲು: ಕೋಡಿಬೈಲು ಕುಟುಂಬದ ಧರ್ಮದೈವ ಮತ್ತು ಪರಿವಾರ ದೈವಗಳ ಧರ್ಮ ನಡಾವಳಿ



ಕೋಡಿಬೈಲು ಕುಟುಂಬದ "ಧರ್ಮದೈವ ಮತ್ತು ಪರಿವಾರ ದೈವಗಳ ಧರ್ಮ ನಡಾವಳಿ"ಯು ಜ.17 ಮತ್ತು 18ರಂದು ಯೇನೆಕಲ್ಲು ಗ್ರಾಮದ ಕೋಡಿಬೈಲು ತರವಾಡು ಮನೆಯಲ್ಲಿ ನಡೆಯಿತು.

ಜ.17ನೇ ಶನಿವಾರದಂದು ಸಂಜೆ ದೈವಗಳ ಭಂಡಾರ ತೆಗೆದು ನಂತರ ರಾತ್ರಿ ಕಲ್ಲುರ್ಟಿ ಮತ್ತು ಜಾವತೆ ದೈವಗಳ ನೇಮೋತ್ಸವ ಹಾಗೂ ಅನ್ನಸಂತರ್ಪಣೆ ನಡೆದು ನಂತರ ಕೊರತ್ತಿ, ವರ್ಣಾರ ಪಂಜುರ್ಲಿ, ವ್ಯಾಘ್ರ ಚಾಮುಂಡಿ, ಕುಪ್ಪೆ ಪಂಜುರ್ಲಿ ದೈವಗಳ ನೇಮೋತ್ಸವ ನಡೆಯಿತು.

ಜ.18ನೇ ಆದಿತ್ಯವಾರದಂದು ಬೆಳಿಗ್ಗೆ ಶ್ರೀ ರುದ್ರ ಚಾಮುಂಡಿ ದೈವದ ನೇಮೋತ್ಸವ, ಪ್ರಸಾದ ವಿತರಣೆ ಹಾಗೂ ಮಧ್ಯಾಹ್ನ ಅನ್ನಸಂತರ್ಪಣೆ ನಡೆದು ನಂತರ ಗುಳಿಗ ದೈವದ ನೇಮೋತ್ಸವ ನಡೆಯುವುದರೊಂದಿಗೆ ಧರ್ಮ ನಡಾವಳಿಯು ಸಂಪನ್ನಗೊಂಡಿತು.
**(ವರದಿ : ಉಲ್ಲಾಸ್ ಕಜ್ಜೋಡಿ)**

## ಕ್ಯಾಂಪ್ಕೋ ಸಂಸ್ಥೆಯ 'ಸಾಂತ್ವನ' ಯೋಜನೆಯಡಿಯಲ್ಲಿ ಆರ್ಥಿಕ ನೆರವಿನ ಚೆಕ್ ಹಸ್ತಾಂತರ



ಕ್ಯಾಂಪ್ಕೋ ಸಂಸ್ಥೆಯ 'ಸಾಂತ್ವನ' ಯೋಜನೆಯಡಿಯಲ್ಲಿ ಆರ್ಥಿಕ ನೆರವಿನ ಚೆಕ್ ಹಸ್ತಾಂತರ ಕಾರ್ಯಕ್ರಮವು ಜ.19 ರಂದು ಜಾಲ್ಸೂರಿನಲ್ಲಿ ನಡೆಯಿತು.

ಕ್ಯಾಂಪ್ಕೋ ಸಂಸ್ಥೆ ಸುಳ್ಯ ಶಾಖೆಯ ಸಕ್ರೀಯ ಸದಸ್ಯರಾದ ಎಂ. ರವಿಶಂಕರ್ ಭಟ್ ಜಾಲ್ಸೂರು ಇವರ ಆಸ್ಪತ್ರೆ ಚಿಕಿತ್ಸಾ ವೆಚ್ಚದ ಸಹಾಯಧನದ ಮೊತ್ತ ರೂ. 96,000/– (ರೂಪಾಯಿ ತೊಂಬತ್ತಾರು ಸಾವಿರ) ದ ಚೆಕ್ಕನ್ನು ಕ್ಯಾಂಪ್ಕೋ ಸಂಸ್ಥೆಯ ನಿರ್ದೇಶಕರಾದ ಮುರಳೀಕೃಷ್ಣ ಕೆ.ಎನ್. ಚಳ್ಳಂಗಾರು ಮತ್ತು ಶ್ರೀಮತಿ ಮಾಲಿನಿ ಪ್ರಸಾದ್ ಬಾಳಿಲ ರವಿಶಂಕರ್ ಭಟ್ ಅವರಿಗೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಪುತ್ತೂರು ಪ್ರಾದೇಶಿಕ ವ್ಯವಸ್ಥಾಪಕರಾದ ಸೀನಿಯರ್ ಮ್ಯಾನೇಜರ್ ಪ್ರಕಾಶ ಕುಮಾರ್ ಶೆಟ್ಟಿ, ಶಾಖೆಯ ಪ್ರಬಂಧಕರಾದ ಸೀನಿಯರ್ ಮ್ಯಾನೇಜರ್ ಸಂತೋಷ್ ಪಿ, ಹಾಗು ಶ್ರೀಮತಿ ಕಲಾವತಿ ರವಿಶಂಕರ್ ಭಟ್ ಉಪಸ್ಥಿತರಿದ್ದರು.

## ಜ.31ರಂದು ಎಲ್ಲಪಡ್ಕ ಶ್ರೀ ಗುಳಿಗರಾಜ ದೈವಸ್ಥಾನದಲ್ಲಿ ವಾರ್ಷಿಕ ನೇಮೋತ್ಸವ




ಹರಿಹರ ಪಳ್ಳತ್ತಡ್ಕ ಗ್ರಾಮದ ಎಲ್ಲಪಡ್ಕ ಶ್ರೀ ಗುಳಿಗರಾಜ ದೈವಸ್ಥಾನದಲ್ಲಿ ಜ.31ನೇ ಶನಿವಾರದಂದು ಶ್ರೀ ಗುಳಿಗರಾಜ ದೈವದ ವಾರ್ಷಿಕ ನೇಮೋತ್ಸವವು ನಡೆಯಲಿದ್ದು, ಬೆಳಿಗ್ಗೆ 7:00 ಗಂಟೆಗೆ ಗಣಹೋಮ, ಬೆಳಿಗ್ಗೆ 9:00 ಗಂಟೆಗೆ ಭಂಡಾರ ಹೊರಡುವುದು, ಬೆಳಿಗ್ಗೆ 9:30ಕ್ಕೆ ಶಿವಪೂಜೆ, ಬೆಳಿಗ್ಗೆ 10:00 ಗಂಟೆಗೆ ಬ್ರಹ್ಮ ರಾಕ್ಷಸ ಪೂಜೆ ಹಾಗೂ ಕಲಶಪೂಜೆ, ಮಧ್ಯಾಹ್ನ 12:00 ಗಂಟೆಗೆ ಮಹಾಪೂಜೆ ಹಾಗೂ ಮಧ್ಯಾಹ್ನ 1:00 ಗಂಟೆಗೆ ಅನ್ನಸಂತರ್ಪಣೆ ನಡೆದು ನಂತರ ಸಂಜೆ 6:00 ಗಂಟೆಗೆ ದೀಪಾರಾಧನೆ, ರಾತ್ರಿ 7:00 ಗಂಟೆಯಿಂದ ಯಕ್ಷಮಣಿ ಗಿರೀಶ್ ಗಡಿಕಲ್ಲು ಇವರ ನಿರ್ದೇಶನ ಮತ್ತು ಸಾರಥ್ಯದಲ್ಲಿ ಶ್ರೀ ಶಾರದಾಂಬ ಯಕ್ಷಗಾನ ಅಧ್ಯಯನ ಕೇಂದ್ರ ಕಲಾಕ್ಷೇತ್ರ ಪಂಜ ಇದರ ವಿದ್ಯಾರ್ಥಿಗಳಿಂದ "ರಘುವಂಶದೀಪ" ಎಂಬ ಯಕ್ಷಗಾನ ಪ್ರದರ್ಶನ ನಡೆಯಲಿದ್ದು, ನಂತರ ರಾತ್ರಿ 8:00 ಗಂಟೆಗೆ ಮಹಾತಂಬಿಲ ಹಾಗೂ ಅನ್ನಸಂತರ್ಪಣೆ ನಡೆದು ರಾತ್ರಿ 12:00 ಗಂಟೆಯಿಂದ ನೇಮೋತ್ಸವ ಪ್ರಾರಂಭಗೊಳ್ಳಲಿದ್ದು, ಮರುದಿವಸ ಫೆ.01ರಂದು ಬೆಳಿಗ್ಗೆ ಸಂಪ್ರೋಕ್ಷಣೆ ನಡೆಯುವುದರೊಂದಿಗೆ ನೇಮೋತ್ಸವವು ಸಂಪನ್ನಗೊಳ್ಳಲಿದೆ.
**(ವರದಿ : ಉಲ್ಲಾಸ್ ಕಜ್ಜೋಡಿ)**

**ಗ್ರಾಮ ಪಂಚಾಯತ್ ಉಬರಡ್ಕ ಮಿತ್ತೂರು**

ಸುಳ್ಯ ತಾಲೂಕು, ದ.ಕ

ದಿನಾಂಕ : 20/01/2026

ಉಬರಡ್ಕ ಮಿತ್ತೂರು ಗ್ರಾಮ ಪಂಚಾಯತ್‌ನ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ, 15ನೇ ಹಣಕಾಸು ಯೋಜನೆ ಮತ್ತು ರಾಜ್ಯ ಹಣಕಾಸು ಆಯೋಗದ ಸಾಮಾಜಿಕ ಪರಿಶೋಧನೆ ವರದಿ ಮಂಡನೆ ಕುರಿತು.

**ವಿಶೇಷ ಗ್ರಾಮ ಸಭೆ**

ಗ್ರಾಮ ಪಂಚಾಯತ್ ಸಭಾಭವನದಲ್ಲಿ ನಡೆಸಲಾಗುವುದು. ಗ್ರಾಮದ ನಾಗರೀಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ವಿಶೇಷ ಗ್ರಾಮಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಈ ಮೂಲಕ ಕೋರಲಾಗಿದೆ.

ನೋಡೆಲ್ ಅಧಿಕಾರಿ : ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸುಳ್ಯ

ದಿನಾಂಕ : 30/01/2026 ಶುಕ್ರವಾರ ಸಮಯ : ಪೂರ್ವಾಹ್ನ ಘಂಟೆ 10.30ಕ್ಕೆ
ಸ್ಥಳ : ಗ್ರಾಮ ಪಂಚಾಯತ್ ಸಭಾಭವನ

**ಏಲಂ ಪ್ರಕಟಣೆ**

ದಿನಾಂಕ 30–01–2026 ರ ಶುಕ್ರವಾರ ಅಪರಾಹ್ನ 12 ಗಂಟೆಗೆ ಬೇರ್ಪಡ್ಕ ಎಂಬಲ್ಲಿ ಗ್ರಾಮ ಪಂಚಾಯತ್‌ಗೆ ಕಾಯ್ದಿರಿಸಿದ ಸ.ನಂ. 167/1C ಯ ಕಾಡುತ್ಪತ್ತಿ ಏಲಂ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಗ್ರಾ.ಪಂ.ಕಛೇರಿಯನ್ನು ಕಛೇರಿ ವೇಳೆ ಸಂಪರ್ಕಿಸುವುದು.

ತಮಗೆಲ್ಲರಿಗೂ ಹಾರ್ದಿಕ ಸ್ವಾಗತ ಬಯಸುವ

ಶ್ರೀ ರವಿಚಂದ್ರ ಎ.
ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ

ಶ್ರೀಮತಿ ಚಿತ್ರಾಕುಮಾರಿ
ಉಪಾಧ್ಯಕ್ಷರು ಮತ್ತು ಸರ್ವ ಸದಸ್ಯರು

ಶ್ರೀಮತಿ ಪೂರ್ಣಿಮಾ ಕೆ.ಕೆ
ಅಧ್ಯಕ್ಷರು

## ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಮಕರ ಸಂಕ್ರಾತಿ ರಥೋತ್ಸವ



ಸುಬ್ರಹ್ಮಣ್ಯ : ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಕರ ಸಂಕ್ರಮಣದಂದು ನಡೆಯುವ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವರ ಕುಕ್ಕೆಲಿಂಗ ಜಾತ್ರೋತ್ಸವದ ಪ್ರಯುಕ್ತ ಜ.15ರಂದು ಬೆಳಗ್ಗೆ ಕುಕ್ಕೆ ಸುಬ್ರಹ್ಮಣ್ಯ ದೇವರ ವೈಭವದ ಸಂಕ್ರಾತಿ ರಥೋತ್ಸವ ಜರುಗಿತು.

ಶ್ರೀ ದೇವಳದ ಪ್ರಧಾನ ಅರ್ಚಕ ವೇದಮೂರ್ತಿ ಸೀತಾರಾಮ ಎಡಪಡಿತ್ತಾಯರು ಉತ್ಸವದ ವಿಧಿವಿಧಾನ ನೆರವೇರಿಸಿದರು.

ಮುಂಜಾನೆ ರಥಬೀದಿಗೆ ಆಗಮಿಸಿದಾಗ ಕ್ಷೇತ್ರ ರಕ್ಷಕಿ ಹೊಸಳಿಗಮ್ಮ ಶ್ರೀ ದೇವರನ್ನು ಎದುರುಗೊಂಡು ನುಡಿಗಟ್ಟು ಸಮರ್ಪಣೆಯಾಯಿತು. ಬಳಿಕ ದೇವರು ಚಿಕ್ಕರಥದಲ್ಲಿ ಆರೂಢರಾದರು. ರಥದಲ್ಲಿ ಶ್ರೀ ದೇವರಿಗೆ ಅರ್ಚಕರು ಪೂಜೆ ನೆರವೇರಿಸಿದರು. ನಂತರ ರಥೋತ್ಸವವವು ರಥಬೀದಿ ವೃತ್ತದ ತನಕ ನಡೆಯಿತು. ನಂತರ ಶ್ರೀ ದೇವರು ಪಾಲಕಿಯಲ್ಲಿ ಸವಾರಿ ಮಂಟಪಕ್ಕೆ ತೆರಳಿದರು. ಸವಾರಿ ಮಂಟಪದ ಸಂಕ್ರಮಣ ಕಟ್ಟೆಯಲ್ಲಿ ಶ್ರೀ ದೇವರ ಕಟ್ಟೆಪೂಜೆ ನೆರವೇರಿತು. ನಂತರ ಶ್ರೀ ದೇವಳದ ಹೊರಾಂಗಣದಲ್ಲಿರುವ ದ್ವಾದಶಿ ಮಂಟಪದಲ್ಲಿ ಮಯೂರ ವಾಹನ ಕುಕ್ಕೆಸುಬ್ರಹ್ಮಣ್ಯನಿಗೆ ಪೂಜೆ ನೆರವೇರಿತು.

ಜ.14ರಂದು ರಾತ್ರಿ ಕುಕ್ಕೆಲಿಂಗ ದೇವರ ಜಾತ್ರೋತ್ಸವದ ಪ್ರಯುಕ್ತ ದೇವರ ಉತ್ಸವಾದಿಗಳು ಹೊರಾಂಗಣದಲ್ಲಿ ನೆರವೇರಿತು. ಈ ಸಂದರ್ಭ ಕಾಚುಕುಜುಂಬ ದೈವದ ನಡಾವಳಿ ನಡೆಯಿತು. ನಂತರ ಶ್ರೀ ದೇವರ ಬಂಡಿ ರಥೋತ್ಸವ ಹಾಗೂ ಪಾಲಕಿ ಉತ್ಸವ ನಡೆಯಿತು.

ಈ ಸಂದರ್ಭ ಶ್ರೀ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾದ ಹರೀಶ್.ಎಸ್.ಇಂಜಾಡಿ, ಸಹಾಯಕ ಕಾರ್ಯನಿರ್ವಹಣಾಧಿಕಾರಿ ಎಸ್. ಜೆ.ವೈ.ರಾಜ್, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅಶೋಕ್ ನೆಕ್ರಾಜೆ, ಸೌಮ್ಯಾ ಭರತ್, ಪ್ರವೀಣ ರೈ ಮರುವಂಜ, ಲೀಲಾ ಮನಮೋಹನ್, ಮಾಸ್ಟರ್ ಪ್ಲಾನ್ ಸಮಿತಿ ಸದಸ್ಯರಾದ ಲೋಲಾಕ್ಷ ಕೈಕಂಬ, ಸತೀಶ್ ಕೂಜುಗೋಡು, ದೇವಳದ ಹೆಬ್ಬಾರ್ ಪ್ರಸನ್ನ ಭಟ್, ಪಾಟಾಳಿ ಲೋಕೇಶ್ ಎ.ಆರ್ ಸೇರಿದಂತೆ ಭಕ್ತಾದಿಗಳು ಉಪಸ್ಥಿತರಿದ್ದರು.

## ಸುಳ್ಯ: ವಿಕಲಚೇತನರ ಸಮನ್ವಯ ಸಭೆ ಮತ್ತು ಮಾಹಿತಿ ಕಾರ್ಯಗಾರ



ಸುಳ್ಯ ಪಟ್ಟಣ ಪಂಚಾಯತ್ ವತಿಯಿಂದ ಜ.19ರಂದು ವಿಕಲಚೇತನರ ಸಮನ್ವಯ ಸಭೆ ಮತ್ತು ಮಾಹಿತಿ ಕಾರ್ಯಗಾರ ಸುಳ್ಯದ ಪುರಭವನದಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ನೆರವೇರಿಸಿ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ, ಕರ್ನಾಟಕದ ಕನಿಷ್ಠ ವೇತನಸಲಹಾ ಸಮಿತಿ ಅಧ್ಯಕ್ಷ ಟಿ ಎಂ ಶಹೀದ್, ಗ್ಯಾರಂಟಿ ಜಿಲ್ಲಾಧ್ಯಕ್ಷ ಭರತ್ ಮುಂಡೋಡಿ, ತಾಲ್ಲೂಕು ಗ್ಯಾರಂಟಿ ಅಧ್ಯಕ್ಷ ಶಾಹುಲ್ ಹಮೀದ್, ಸುಡಾ ಮುಸ್ತಫಾ ಎಂ, ತಹಶೀಲ್ದಾರ್ ಮಂಜುಳಾ, ಮುಖ್ಯಧಿಕಾರಿ ಬಸವ ರಾಜ್ ವೈದ್ಯಧಿಕಾರಿ ನವೀನ್, ಸಾಂದೀಪನಿ ವಿಶೇಷ ಶಾಲೆಯ ಅಧ್ಯಕ್ಷ ಎಂ.ಬಿ ಸದಾಶಿವ, ರವಿಕಲಾ, ಹರಿಣಿ ಸದಾಶಿವ, ಎಂ ಆರ್ ಡಬ್ಲ್ಯೂ ಚಂದ್ರ ಶೇಖರ್, ಧೀರಜ್ ಕ್ರಾಸ್ತಾ ಮತ್ತು ನಗರ ವಿಕಲ ಚೇತನರ ಮೇಲ್ವಿಚಾರಕರಾದ ಪ್ರವೀಣ್ ನಾಯಕ್ ವಿಕಲ ಚೇತನರ ಹಕ್ಕುಗಳ ಮತ್ತು ಸವಲತ್ತುಗಳ ಬಗ್ಗೆ ಮಾಹಿತಿ ಕಾರ್ಯಾಗಾರ ನೀಡಿದರು,

ಮುಖ್ಯಧಿಕಾರಿ ಬಸವ ರಾಜ್ ಸ್ವಾಗತಿಸಿದರು, ಪ್ರವೀಣ್ ನಾಯಕ್ ಪ್ರಾಸ್ತಾವಿಕ ಭಾಷಣ ಮಾಡಿದರು ಜಯಲಕ್ಷ್ಮಿ ಧನ್ಯವಾದವಿತ್ತರು. ದಿಲೀಪ್ ಕಾರ್ಯಕ್ರಮ ನಿರೂಪಿಸಿದರು, ಸಾಂದೀಪನಿ ವಿಶೇಷ ಶಾಲೆಯ ವಿದ್ಯಾರ್ಥಿಗಳಿಂದ ವಿಶೇಷ ನೃತ್ಯ ಕಾರ್ಯಕ್ರಮ ನಡೆಯಿತು.

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ
**ಶ್ರೀ ಮಹಾವಿಷ್ಣು ದೇವಸ್ಥಾನ ಕಾಯರ್ತೋಡಿ, ಸುಳ್ಯ**
ಸುಳ್ಯ ತಾಲೂಕು ದ.ಕ–574239, ದೂರವಾಣಿ: 08257–231431, 9483681431



**ಶ್ರೀ ದೇವರ ಕಾಲಾವಧಿ ಜಾತ್ರೋತ್ಸವ**

ದಿನಾಂಕ: 26–01–2026ನೇ ಸೋಮವಾರ ಮೊದಲ್ಗೊಂಡು 28–01–2026 ಬುಧವಾರದ ತನಕ

ಶ್ರೀ ಮಹಾವಿಷ್ಣು ದೇವರ ಕಾಲಾವಧಿ ಜಾತ್ರೋತ್ಸವವು ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಯವರ ಮಾರ್ಗದರ್ಶನದಲ್ಲಿ ವಿಜೃಂಭಣೆಯಿಂದ ನಡೆಯಲಿದೆ. ಭಗವದ್ಭಕ್ತರಾದ ತಾವು ಈ ದಿವ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

ಶ್ರೀ ಕಿಶೋರ್ ಕೆ.
ಸಂಚಾಲಕರು

ಶ್ರೀಮತಿ ವಿಜಯ ಶೀನಪ್ಪ
ಸಹ ಸಂಚಾಲಕರು
ಮತ್ತು ಸರ್ವ ಸದಸ್ಯರು ಸೇವಾ ಸಮಿತಿ

ಶ್ರೀ ನೀಲಕಂಠ ಭಟ್ ಎಂ.ಪಿ
ಪ್ರಧಾನ ಅರ್ಚಕರು

ಶ್ರೀ ಎಂ.ವೆಂಕಪ್ಪ ಗೌಡ
ಅಧ್ಯಕ್ಷರು ಮತ್ತು

ಶ್ರೀ ವಿಠಲ ಬಾಣೂರು, ಶ್ರೀ ಜತ್ತಪ್ಪ ರೈ.ಎ., ಶ್ರೀ ಕುಶಾಲಪ್ಪ ಸೂರ್ತಿಲ, ಶ್ರೀ ಗೋಕುಲ್‌ದಾಸ್ ಕೆ., ಶ್ರೀ ಭವಾನಿಶಂಕರ ಕೆ., ಶ್ರೀಮತಿ ಶ್ರುತಿ ಮಂಜುನಾಥ., ಶ್ರೀಮತಿ ಕುಸುಮಾವತಿ ರಾಮಕೃಷ್ಣ
ಸದಸ್ಯರುಗಳು, ವ್ಯವಸ್ಥಾಪನಾ ಸಮಿತಿ

ಹಾಗೂ ಊರಿನ ಸರ್ವ ಭಗವದ್ಭಕ್ತರು
ಶ್ರೀ ಮಹಾವಿಷ್ಣು ದೇವಸ್ಥಾನ ಕಾಯರ್ತೋಡಿ, ಸುಳ್ಯ ದ.ಕ

**ಕಾರ್ಯಕ್ರಮಗಳ ವಿವರ**

ದಿನಾಂಕ 20–01–2026ನೇ ಮಂಗಳವಾರ ಬೆಳಗ್ಗೆ ಗಂಟೆ 9.00ಕ್ಕೆ ಶ್ರೀ ದೇವರಿಗೆ ಗೊನೆ ಕಡಿಯುವುದು

ದಿನಾಂಕ 26–01–2026ನೇ ಸೋಮವಾರ ಸಂಜೆ ಗಂಟೆ 4.00ರಿಂದ 'ಸಂಸ್ಕಾರ ದೀಪಿಕೆ' ಶ್ರೀ ಚೆನ್ನಕೇಶವ ದೇವಾಲಯ ಇಲ್ಲಿನ ವಿದ್ಯಾರ್ಥಿಗಳಿಂದ ಭಗವದ್ಗೀತೆ ಪಠಣ ಮತ್ತು ವಿಷ್ಣು ಸಹಸ್ರ ನಾಮ ಪಾರಾಯಣ, ಸಂಜೆ ಗಂಟೆ 6.00ಕ್ಕೆ ಜಾತ್ರೋತ್ಸವ ಪ್ರಯುಕ್ತ ಶ್ರೀ ದೇವರಿಗೆ ದೀಪೋತ್ಸವ, ಸಂಜೆ ಗಂಟೆ 6.15ಕ್ಕೆ ವೇದಪಾರಾಯಣ 'ಶ್ರೀ ಕಾಂಚಿಕಾಮಕೋಟಿ ವೇದ ವಿದ್ಯಾಲಯ ಭಾರದ್ವಾಜಾಶ್ರಮ, ಅರಂಬೂರು–ಸುಳ್ಯ ಇವರಿಂದ, ಸಂಜೆ ಗಂಟೆ 7.30ಕ್ಕೆ ಮಹಾಪೂಜೆ, ರಾತ್ರಿ ಗಂಟೆ 8.00ಕ್ಕೆ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ ಗಂಟೆ 9.00ರಿಂದ ಅನ್ನಸಂತರ್ಪಣೆ

ದಿನಾಂಕ 27–01–2026ನೇ ಮಂಗಳವಾರ ಬೆಳಗ್ಗೆ 7.30ಕ್ಕೆ 'ಗಣಪತಿ ಹವನ', ಬೆಳಗ್ಗೆ 9.00ಕ್ಕೆ ಉಗ್ರಾಣ ತುಂಬಿಸುವುದು, ಬೆಳಗ್ಗೆ 9.30ಕ್ಕೆ ಹಸಿರುವಾಣಿ ಮೆರವಣಿಗೆ (ಶ್ರೀರಾಮ ಭಜನಾ ಮಂದಿರದ ಬಳಿಯಿಂದ ಹೊರಟು ದೇವಾಲಯದ ತನಕ), ಬೆಳಿಗ್ಗೆ ಗಂಟೆ 10.00ಕ್ಕೆ ತಂತ್ರಿಗಳ ಆಗಮನ, ಬೆಳಿಗ್ಗೆ ಗಂಟೆ 10.30ಕ್ಕೆ ಶುದ್ಧಿ ಕಲಶ, ಬೆಳಿಗ್ಗೆ ಗಂಟೆ 11.00ರಿಂದ 'ತುಲಾಭಾರ ಸೇವೆ', ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಮಧ್ಯಾಹ್ನ ಗಂಟೆ 1.00ರಿಂದ ಅನ್ನಸಂತರ್ಪಣೆ ಸಂಜೆ 7.30ರಿಂದ ಮಹಾಪೂಜೆ ಮತ್ತು ಅನ್ನಸಂತರ್ಪಣೆ, ರಾತ್ರಿ ಗಂಟೆ 8.00ರಿಂದ ಶ್ರೀ ದೇವರ ಭೂತಬಲಿ ಉತ್ಸವ ಮತ್ತು ಕಟ್ಟೆಪೂಜೆ

ದಿನಾಂಕ 28–01–2026ನೇ ಬುಧವಾರ ಬೆಳಗ್ಗೆ ಗಂಟೆ 9.30ಕ್ಕೆ ದೇವರ ಶ್ರೀಬಲಿ, ದರ್ಶನಬಲಿ, ಬಟ್ಟಲು ಕಾಣಿಕೆ, ಶ್ರೀಮುಡಿ ಗಂಧ–ಪ್ರಸಾದ ಮತ್ತು ಶ್ರೀ ದೇವರಿಗೆ ಮಹಾಪೂಜೆ, ಮಧ್ಯಾಹ್ನ ಗಂಟೆ 1.00ರಿಂದ ಅನ್ನಸಂತರ್ಪಣೆ ಸಂಜೆ 6.30ರಿಂದ ಶ್ರೀ ದೇವರಿಗೆ 'ರಂಗಪೂಜೆ', ಸಂಜೆ ಗಂಟೆ 7.30ಕ್ಕೆ ಮಹಾಪೂಜೆ ಮತ್ತು ಅನ್ನಸಂಪರ್ತಣೆ ರಾತ್ರಿ ಗಂಟೆ 7.30ರಿಂದ ಸಾಂಸ್ಕೃತಿಕ ಕಾರ್ಯಕ್ರಮ 'ಸಂಸಾರ ಕಲಾವಿದೆರ್ ಪುತ್ತೂರು ಅಭಿನಯಿಸುವ ನಂಬಿಕೆದಾಯೆ ಭಕ್ತಿಪ್ರಧಾನ, ಹಾಸ್ಯ, ಸಾಮಾಜಿಕ ತುಳುನಾಟಕ'

# ವಿಜೃಂಭಣೆಯಿಂದ ನಡೆದ ಪೆರುವಾಜೆ ಬ್ರಹ್ಮರಥೋತ್ಸವ



ಪೆರುವಾಜೆ ಶ್ರೀ ಜಲದುರ್ಗಾದೇವಿ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರೆ ಜ.16 ರಿಂದ ಆರಂಭಗೊಂಡಿದ್ದು, ಜ.19 ರಂದು ಬ್ರಹ್ಮರಥೋತ್ಸವ ಹಾಗೂ ಬೆಡಿ ಪ್ರದರ್ಶನ ನಡೆಯಿತು.

ಜ.19 ರಂದು ಬೆಳಗ್ಗೆ ಶ್ರೀ ದೇವರ ಬಲಿ ಹೊರಟು ಉತ್ಸವ, ಮಧ್ಯಾಹ್ನ ಶ್ರೀ ದೇವರಿಗೆ ಕಲಶಾಭಿಷೇಕ, ಪಲ್ಲಕ್ಕಿ ಉತ್ಸವ, ಮಹಾಪೂಜೆ, ಪ್ರಸಾದ ವಿತರಣೆ ನಡೆಯಿತು. ರಾತ್ರಿ ಶ್ರೀ ದೇವರ ಬಲಿ ಹೊರಟು ಉತ್ಸವ, ವಸಂತ ಕಟ್ಟೆ ಪೂಜೆ, ವ್ಯಾಘ್ರಚಾಮುಂಡಿ ದೈವ(ಪಿಲಿಭೂತ)ದ ಭಂಡಾರ ಬರುವುದು, ಅನಂತರ ಬ್ರಹ್ಮರಥೋತ್ಸವ ಹಾಗೂ ಪೆರುವಾಜೆ ಬೆಡಿ ಪ್ರದರ್ಶನ ನಡೆಯಿತು. ಆ ಬಳಿಕ ಮಹಾಪೂಜೆ, ಶಯನೋತ್ಸವ, ಕವಾಟ ಬಂಧನ ನಡೆಯಿತು.

ಜ.20 ರಂದು ಬೆಳಗ್ಗೆ 7:00ಕ್ಕೆ ಕವಾಟೋದ್ಘಾಟನೆ, ಶ್ರೀ ದೇವರಿಗೆ ತೈಲಾಭಿಷೇಕ, ಪಂಚಾಮೃತಾಭಿಷೇಕ, ಸೀಯಾಳಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆ ನಡೆಯಿತು. ಮಧ್ಯಾಹ್ನ ತುಲಾಭಾರ ಸೇವೆ, ಯಾತ್ರಾ ಹೋಮ, ಪ್ರಸಾದ ವಿತರಣೆ ನಡೆಯಿತು.

ರಾತ್ರಿ ಶ್ರೀ ದೇವರ ಬಲಿ ಹೊರಟು ಕಟ್ಟೆಪೂಜೆ, ಅವಭೃತ ಸ್ನಾನ ಧ್ವಜಾವರೋಹಣ, ಮಹಾಪೂಜೆ, ಪ್ರಸಾದ ವಿತರಣೆ ನಂತರ ಉಳ್ಳಾಕುಲು, ಮೈಷಂತಾಯ, ಶ್ರೀ ವ್ಯಾಘ್ರಚಾಮುಂಡಿ ದೈವದ ಭಂಡಾರ ತೆಗೆಯುವ ಕಾರ್ಯಕ್ರಮ ನಡೆಯಿತು.

ಜ.21ರಂದು ಬೆಳಿಗ್ಗೆ ಮಹಾಗಣಪತಿ ಹೋಮ,ಕಲಶ ಪೂಜೆ, ಶ್ರೀ ಉಳ್ಳಾಕುಲು ಮತ್ತು ಮೈಷಂತಾಯ ದೈವಗಳ ನೇಮೋತ್ಸವ, ಪ್ರಸಾದ ವಿತರಣೆ ನಡೆಯಿತು. ಮದ್ಯಾಹ್ನ ಶ್ರೀ ದೇವರಿಗೆ ಸಂಪ್ರೋಕ್ಷಣೆ, ಕಲಶಾಭಿಷೇಕ, ಮಹಾಪೂಜೆ, ವೈದಿಕ ಮಂತ್ರಾಕ್ಷತೆ, ಪ್ರಸಾದ ವಿತರಣೆ ನಡೆಯಿತು. ಮಧ್ಯಾಹ್ನ ಶ್ರೀ ವ್ಯಾಘ್ರಚಾಮುಂಡಿ ದೈವದ ನೇಮೋತ್ಸವ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಸಂಜೆ 7:00ಕ್ಕೆ ಶ್ರೀ ಕಲ್ಲುರ್ಟಿ-ಕಲ್ಕುಡ ದೈವದ ನೇಮೋತ್ಸವ ನಡೆಯಿತು. ಈ ಸಂದರ್ಭದಲ್ಲಿ ಭಕ್ತಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು

# ಸುಳ್ಯ ಸೈಂಟ್ ಬ್ರಿಜಿಡ್ ಶಾಲೆಯ ಅಮೃತಮಹೋತ್ಸವ ಆಚರಣೆ-ಸನ್ಮಾನ




ಸುಳ್ಯದ ಬೀರಮಂಗಲದಲ್ಲಿರುವ ಸೈಂಟ್ ಬ್ರಿಜಿಡ್ಸ್ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಅಮೃತ ಮಹೋತ್ಸವ ಕಾರ್ಯಕ್ರಮವು ಜ.20ರಂದು ನಡೆಯಿತು.

ಮುಖ್ಯ ಅತಿಥಿಯಾಗಿ ಶಾಸಕಿ ಭಾಗೀರಥಿ ಮುರುಳ್ಯ, ಮಂಗಳೂರು ಕೆಥೋಲಿಕ್ ಶಿಕ್ಷಣ ಮಂಡಳಿ ಕಾರ್ಯದರ್ಶಿ ರೆ.ಫಾ.ಪ್ರವೀಣ್ ಲಿಯೋ ಲಸ್ರಾದೊ, ಜೊತೆ ಕಾರ್ಯದರ್ಶಿ ರೆ.ಫಾ.ಒಲ್ವಿನ್ ಎಡ್ವರ್ಡ್ ಡಿಕುನ್ಹಾ,ಸೈಂಟ್ ಬ್ರಿಜಿಡ್ ಶಾಲೆ ಹಿರಿಯ ವಿದ್ಯಾರ್ಥಿ ಪದ್ಮಶ್ರೀ ಗಿರೀಶ್ ಭಾರದ್ವಾಜ್, ಸುಳ್ಯ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಂ ಮುಸ್ತಫಾ, ಮಂಗಳೂರು ಪ್ರಾಂತ್ಯದ ಪ್ರಾಂತೀಯ ಮುಖ್ಯಸ್ಥರಾದ ಸಿಸ್ಟರ್ ಕ್ಲೋರಾ ಮಿನೇಜಸ್, ಕ್ಷೇತ್ರ ಶಿಕ್ಷಣಾಧಿಕಾರಿ ಶೀತಲ್ ಯು. ಕೆ, ಚರ್ಚ್ ಪಾಲನಾ ಸಮಿತಿ ಉಪಾಧ್ಯಕ್ಷ ಸುನಿಲ್ ಮಸ್ಕರೇನಸ್, ಸೈಂಟ್ ಜೋಸೆಫ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಮೇರಿ ಸ್ಟೆಲ್ಲಾ, ಸೈಂಟ್ ಬ್ರಿಜಿಡ್ ಶಾಲೆಯ ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಆ್ಯಂಟನಿ ಮೇರಿ ಅಮೃತ ಮಹೋತ್ಸವ ಸಮಿತಿ ಅಧ್ಯಕ್ಷ ನವೀನ್ ಮಚಾದೋ,ಪೋಷಕ ಸಮಿತಿಯ ಉಪಾಧ್ಯಕ್ಷ ನವೀನ್ ಚಂದ್ರ ಚಾತುಬಾಯಿ ಉಪಸ್ಥಿತರಿದ್ದರು. ಶಾಲೆಯಲ್ಲಿ ಸೇವೆ ಸಲ್ಲಿಸಿದ ಸಂಚಾಲಕರುಗಳು, ಮುಖ್ಯ ಶಿಕ್ಷಕರು, ಸಹಶಿಕ್ಷಕರು, ಹಳೆ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಶಾಲೆಯ ಜೊತೆ ಕಾರ್ಯದರ್ಶಿ ರೆ.ಫಾ.ಒಲ್ವಿನ್ ಎಡ್ವರ್ಡ್ ಡಿಕುನ್ಹಾ ಸ್ವಾಗತಿಸಿ, ಸಿಸ್ಟರ್ ಗ್ರೇಸ್ ಡಿಸೋಜ ವಂದಿಸಿದರು. ದೀಪಿಕಾ ಅತ್ಯಾಡಿ ಹಾಗೂ ಆಶಾ ಅಂಬೆಕಲ್ಲು ಕಾರ್ಯಕ್ರಮ ನಿರೂಪಿಸಿದರು.

# ಜ.25: ಬೆಂಗಳೂರಿನಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ವತಿಯಿಂದ ಸಪ್ತಪದಿ-2026 ಭಾವೀ ವಧುವರರ ಮುಖಾಮುಖಿ

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ (ರಿ.) ಬೆಂಗಳೂರು, ಮಹಿಳಾ ಘಟಕ ಮತ್ತು ಯುವ ಘಟಕದ ಸಹಯೋಗದೊಂದಿಗೆ "ಸಪ್ತಪದಿ-2026" ಭಾವೀ ವಧುವರರ ಮುಖಾಮುಖಿ ಭೇಟಿ ಕಾರ್ಯಕ್ರಮವು ಜ.25ರಂದು ಬೆಂಗಳೂರಿನ "ನಮ್ಮನೆ" ಸಾಂಸ್ಕೃತಿಕ ಕಲಾ ಕೇಂದ್ರ,ದಲ್ಲಿ ನಡೆಯಲಿದೆ.




ಹತ್ತು ಕುಟುಂಬ ಹದಿನೆಂಟು ಗೋತ್ರ ಗೌಡ ಜನಾಂಗದ ಭಾವೀ ವಧುವರರು ಇಲ್ಲವೇ ಅವರ ಪೋಷಕರು ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ಅಧ್ಯಕ್ಷರಾದ ಪಳಂಗಪ್ಪ ಪಾಣತ್ತಲೆಯವರು ವಿನಂತಿಸಿದ್ದಾರೆ.

ಹೆಚ್ಚಿನ ವಿವರಗಳಿಗೆ ಈ ಕೆಳಕಂಡ ಮಹಿಳಾ ಘಟಕದ ಪದಾಧಿಕಾರಿಗಳನ್ನು ಸಂಪರ್ಕಿಸಬೇಕೆಂದು ಕೋರಲಾಗಿದೆ.

ಶ್ರೀಮತಿ ಗಂಗಮ್ಮ ಸುರೇಶ ನೆರಿಯನ 9901151027 (ಅಧ್ಯಕ್ಷೆ), ಶ್ರೀಮತಿ ವನಿತ ರಾಧಾಕೃಷ್ಣ ಗುತ್ತಿಗಾರುಮೂಲೆ-9483525328 (ಉಪಾಧ್ಯಕ್ಷೆ), ಶ್ರೀಮತಿ ರಾಧ ದಾಮೋದರ ಕುದುಕುಳಿ-9686955288 (ಕಾರ್ಯದರ್ಶಿ) ಶ್ರೀ ಶಿರಕಜೆ ಪೊಣ್ಣಪ್ಪ (ವ್ಯವಸ್ಥಾಪಕರು)-9483742983.

ನೊಂದಣಿಗಾಗಿ: http://KDKGOWDASAMAJA.COM ಸಂಪರ್ಕಿಸಬಹುದು.

# ಡಾ. ಕಲ್ಲಡ್ಕ ಪ್ರಭಾಕರ ಭಟ್ ಅವರ ವಿರುದ್ಧ ಕೇಸು ದಾಖಲಿಸಿರುವುದು ಖಂಡನೀಯ

## ಹಿಂದುತ್ವ ವಿರೋಧಿಸುವುದೇ ಕಾಂಗ್ರೆಸ್ಸಿನ ನಿಜವಾದ ಜಾತ್ಯಾತೀತತೆ: ವಿನಯ ಕಂದಡ್ಕ




ಸುಳ್ಯ ಬಿಜೆಪಿ ಮಂಡಲ ಸಮಿತಿ ಪತ್ರಿಕಾಗೋಷ್ಠಿ

ಪುತ್ತೂರಿನಲ್ಲಿ ನಡೆದ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮದ ಭಾಷಣಕ್ಕೆ ಸಂಬಂಧಿಸಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖರಾದ ಡಾ. ಕಲ್ಲಡ್ಕ ಪ್ರಭಾಕರ ಭಟ್ ಅವರ ವಿರುದ್ಧ ಎಫ್ ಐ ಆರ್ ದಾಖಲಿಸಲಾದ ಎಫ್.ಐ.ಆರ್ ದಾಖಲಿಸಿರುವ ಬಗ್ಗೆ ಪವಿತ್ರ ಓಂಕಾರ ಧ್ವಜದ ಬಗ್ಗೆ ಅಪಸ್ವರ ಎತ್ತಿ ಹಿಂದುಗಳ ಭಾವನೆಗೆ ನೋವು ತರುವ ಹೇಳಿಕೆ ನೀಡಿದ ಹಿರಿಯ ಕಾಂಗ್ರೆಸ್ ಮುಖಂಡ ರಮಾನಾಥ ರೈಯವರ ಹೇಳಿಕೆ ಖಂಡಿಸಿ ದ.ಕ. ಜಿಲ್ಲಾ ಬಿ.ಜೆ.ಪಿ. ಮತ್ತು ಸುಳ್ಯ ಮಂಡಲ ಪತ್ರಿಕಾಗೋಷ್ಠಿ ನಡೆಸಿ ಖಂಡನ ವ್ಯಕ್ತಪಡಿಸಿದೆ.

ಜ.22ರಂದು ಸುಳ್ಯದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ದ.ಕ. ಜಿಲ್ಲಾ ಬಿ.ಜೆ.ಪಿ. ವಕ್ತಾರ ವಿನಯ ಕುಮಾರ್ ಮುಳುಗಾಡು ಮಾತನಾಡಿ ಹಿಂದುತ್ವ, ಸಂಸ್ಕೃತಿ ಹಾಗೂ ರಾಷ್ಟ್ರೀಯತೆಗೆ ಕೆಲಸ ಮಾಡುತ್ತಿರುವ ಡಾ.ಪ್ರಭಾಕರ ಭಟ್ ವಿರುದ್ಧ ಎಫ್.ಐ.ಆರ್ ದಾಖಲಿಸಿರುವುದು ಹಾಗೂ ಹಿಂದೂಗಳ ಅಸ್ಮಿತೆ ತಾತ್ವಿಕ ಸಿದ್ಧಾಂತ ಇರುವ ಓಂಕಾರ ಇರುವ ಧ್ವಜವನ್ನು ಉಡುಪಿ ಪರ್ಯಾಯದಲ್ಲಿ ಹಾರಿಸಿರುವುದನ್ನು ಖಂಡಿಸಿ ಹೇಳಿಕೆ ನೀಡಿರುವುದು ಸರಿಯಲ್ಲ.

ಹಿಂದೂ ಧಮನಕಾರಿ ಕಾಂಗ್ರೆಸ್ ನೀತಿಯನ್ನು ಖಂಡಿಸಬೇಕಿದೆ. ದೇಶದಲ್ಲಿ ಪಾಕಿಸ್ತಾನ ಧ್ವಜ ಹಾರಿಸಿದರೂ ತೊಂದರೆಯಿಲ್ಲ, ನಮ್ಮ ದೇವಸ್ಥಾನಗಳಲ್ಲಿ ಕೇಸರಿ ಹಾರಿಸುವುದು ತಪ್ಪು ಎಂದು ಕಾಂಗ್ರೆಸ್ ಅಭಿಪ್ರಾಯವಾಗಿದೆ ಎಂದರು.

ಬಿ.ಜೆ.ಪಿ.ಸುಳ್ಯ ಮಂಡಲದ ಪ್ರಧಾನ ಕಾರ್ಯದರ್ಶಿ ವಿನಯಕುಮಾರ್ ಕಂದಡ್ಕ ಮಾತನಾಡಿ ಹಿಂದೂತ್ವವನ್ನೇ ವಿರೋಧಿಸುವ ಮಾನಸಿಕತೆ ಕಾಂಗ್ರೆಸ್ ನಾಯಕರಲ್ಲಿ ಬರುತ್ತಾ ಇದೆ. ರಾಹುಲ್ ಗಾಂಧಿಯವರೇ ನಮ್ಮದು ಮುಸಲ್ಮಾನರ ಪಾರ್ಟಿ ಎಂದು ಹೇಳಿದ್ದಾರೆ. ಅದರ ಮುಂದುವರಿದ ಭಾಗವಾಗಿ ಕರ್ನಾಟಕದಲ್ಲಿ ಹಿಂದುತ್ವವನ್ನೇ ವಿರೋಧಿಸುವ ಪ್ರಕ್ರಿಯ ಮಾಡುತ್ತಾ ಬಂದಿದೆ. ಭಗವಾಧ್ವಜ ಆರ್.ಎಸ್.ಎಸ್. ಧ್ವಜ ಎಂದು ಕಾಂಗ್ರೆಸ್ ಬಾಲಿಶವಾದ ಹೇಳಿಕೆ ನೀಡಿದೆ. ಆದರೇ ಭಗವಾಧ್ವಜ ಪುರಾಣ ಕಾಲದಿಂದಲೂ ಬಂದಿದೆ ಎಂಬ ವಿಚಾರ ಕಾಂಗೆಸ್‌ಗೆ ತಿಳಿದಿಲ್ಲ. ಹಿಂದೂ ಸಂಸ್ಕೃತಿಯನ್ನು, ಭಾರತೀಯ ಸಂಸ್ಕೃತಿಯನ್ನು ವಿರೋಧಿಸಿದ್ದರಿಂದ ಇಂದು ಅವರನ್ನು ಜನ ಕೂಡ ತಿರಸ್ಕಾರ ಮಾಡಿದ್ದಾರೆ ಎಂದರು. ಉಡುಪಿ ಪರ್ಯಾಯದಲ್ಲಿ ಭಗವಾಧ್ವಜವನ್ನು ಹಾರಿಸಿರುವುದು ಕಾಂಗ್ರೆಸ್ ನವರಿಗೆ ಅವರ ಕೋಮವಾದಿ ಮಾನಸಿಕತೆ ಜಾಗೃತವಾಗಿದೆ.

ಜಿಲ್ಲಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ದೂರು ಕೊಟ್ಟಿದೆ. ನಾವು ಈಗ ಕೋಮವಾದ ಯಾವುದು ಎಂದು ಪ್ರಶ್ನೆ ಮಾಡಬೇಕಿದೆ. ಜಾತ್ಯಾತೀತತೆ ಹಿಂದೂ ಸಂಪ್ರದಾಯದ ಉಡುಪಿ ಪರ್ಯಾಯದಲ್ಲಿ ಮತ್ತೆ ಯಾವ ಧ್ವಜವನ್ನು ಹಾಕಬೇಕಿತ್ತು ಎಂದು ಪ್ರಶ್ನೆ ಮಾಡಬೇಕಿದೆ.

ಪುತ್ತೂರಿನ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ನಡೆದ ವಿವೇಕಾನಂದ ಜಯಂತಿ ಕಾರ್ಯಕ್ರಮದಲ್ಲಿ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರು ಭಾರತೀಯ ಸಂಸ್ಕೃತಿ, ಹಿಂದೂ ಸಂಸ್ಕೃತಿ ಬಗ್ಗೆ ಮಾತನಾಡಿರುವುದನ್ನು ಖಂಡಿಸಿ ಕಾಂಗ್ರೆಸ್ ಬೆಂಬಲಿತ ಸಂಘಟನೆಗಳು ದೂರು ನೀಡಿದೆ. ಹಿಂದೂ ಸಂಸ್ಕೃತಿ ಬಗ್ಗೆ ಮಾತನಾಡುವುದು ಅಪರಾಧವಾಗಿದೆ. ಬಾಂಗ್ಲಾ ಅಕ್ರಮ ವಲಸಿಗರನ್ನು ಪ್ರಶ್ನೆ ಮಾಡಿದ ಪುನೀತ್ ಕೆರೆಹಳ್ಳಿ ಮೇಲೆ ಕೇಸು ಮಾಡುತ್ತಾರೆ. ಆದರೇ ಬಾಂಗ್ಲಾ ಅಕ್ರಮ ವಲಸಿಗರ ಬಗ್ಗೆ ಕಾಂಗ್ರೆಸ್ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಅವರೆಲ್ಲರಿಗೂ ಸರಕಾರ ಎಲ್ಲಾ ಸವಲತ್ತುಗಳನ್ನು ನೀಡಿದೆ. ಈ ದೇಶದಲ್ಲಿ ಹಿಂದುತ್ವ ವಿರೋಧಿಸುವುದೇ ಕಾಂಗ್ರೆಸ್ಸಿನ ನಿಜವಾದ ಜಾತ್ಯಾತೀತತೆ ಎಂದ ವಿನಯ ಕಂದಡ್ಕ ಅವರು ಹಿಂದೂ ಧಮನಕಾರಿ ನೀತಿಯನ್ನು ಕಾಂಗ್ರೆಸ್ ಸರಕಾರ ಬಿಡಬೇಕು ಎಂದರು.

ಬಿ.ಜೆ.ಪಿ.ಸುಳ್ಯ ಮಂಡಲದ ಕೋಶಾಧಿಕಾರಿ ಸುಭೋದ್ ಶೆಟ್ಟಿ ಮೇನಾಲ, ಬಿ.ಜೆ.ಪಿ. ಸುಳ್ಯ ನಗರ ಎಸ್.ಸಿ. ಮೋರ್ಚಾದ ಜಗನ್ನಾಥ , ಅಜ್ಜಾವರ ಶಕ್ತಿ ಕೇಂದ್ರ ಅಧ್ಯಕ್ಷ ರಾಜೇಶ್ ರೈ ಮೇನಾಲ, ಸುಳ್ಯ ನಗರ ಮಹಾಶಕ್ತಿ ಕೇಂದ್ರ ಅಧ್ಯಕ್ಷ ಎ.ಟಿ.ಕುಸುಮಾಧರ, ಕಾರ್ಯದರ್ಶಿ ನಾರಾಯಣ ಶಾಂತಿನಗರ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಎರಡು ತಿಂಗಳಲ್ಲಿ 14 ಕೋಟಿಗೂ ಮಿಕ್ಕಿ ಆದಾಯ

ದಕ್ಷಿಣ ಭಾರತದ ನಾಗರಾಧನೆಯ ಹೆಸರಾಂತ ಪುಣ್ಯಕ್ಷೇತ್ರ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ 2025 ನವೆಂಬರ್ ಹಾಗೂ ಡಿಸೆಂಬರ್ ಎರಡು ತಿಂಗಳಲ್ಲಿ ಒಟ್ಟು 14 ಕೋಟಿ 77 ಲಕ್ಷದ 80,000 ರೂ. ಆದಾಯ ಬಂದಿರುತ್ತದೆ. ನವೆಂಬರ್ ತಿಂಗಳಲ್ಲಿ ವಿವಿಧ ಸೇವೆಗಳಿಂದ 4,56,21,739 ರೂಪಾಯಿ, ಹುಂಡಿಯಿಂದ 1,09,76,957 ರೂಪಾಯಿ ಹಾಗೂ ಅನ್ನದಾನ ನಿಧಿಯಿಂದ 83,57,769 ಲಕ್ಷ ರೂಪಾಯಿ ಆದಾಯ ಬಂದಿರುತ್ತದೆ.




ಹಾಗೆಯೇ ಡಿಸೆಂಬರ್ ತಿಂಗಳ ವಿವಿಧ ಸೇವೆಗಳಿಂದ 5,30,18,923 ರೂಪಾಯಿ, ಹುಂಡಿಯಿಂದ 1,90,63,518 ರೂಪಾಯಿ, ಅನ್ನದಾನ ನಿಧಿಯಿಂದ 1,07,41,594 ರೂಪಾಯಿ ಆದಾಯ ಬಂದಿರುತ್ತದೆ. ಇದನ್ನು ಹೊರತುಪಡಿಸಿ ವಸತಿಗೃಹಗಳು ಹಾಗೂ ಇನ್ನಿತರ ಮೂಲಗಳಿಂದ ಬಂದ ಮೊಬಲಗು ಕೂಡ ಇರುತ್ತದೆ ಎಂದು ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಸ್ಥಾನದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ ತಿಳಿಸಿದರು.




Printed, Published & Edited by Muralidhara A, Owned by Muralidhara A, Addanapare House, P.O & Villege Guthigar, Sullia Taluk D.K , Published from 2nd Floor, Vinayaka Complex, Carstreet Sullia, D.K 574239 & Printed at Digantha Mudrana Ltd, Manglore D.K.